2019 ಕ.ತೀ.ವ 1593

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್

## ಎಮ್.ಎಸ್. ಅನುರಾಧಾ ಮತ್ತು ಇತರರು –ವಿರುದ್ಧ– ಎಸ್.ವಿ. ರಾಮಾನುಜಮ್ಮ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ನಿಯತ ಎರಡನೇ ಅಪೀಲು.

ಒ.ಎಸ್. ಸಂಖ್ಯೆ: 257/1992ರಲ್ಲಿ ಹೊರಡಿಸಿದ ದಿನಾಂಕ: 24.05.1999ರ ಪ್ರಾಥಮಿಕ ಡಿಕ್ರಿಯು ಅಕೃತತೆಯಿಂದ ಕೂಡಿದ್ದು, ಅದು ಅಪ್ರವರ್ತನೀಯವಾದುದಾಗಿದೆ; ಹಾಗೂ ದಾವೆ ನಿಗದಿತ ಸ್ವತ್ತುಗಳ ವಿಭಜನೆಯ ಮೇಲೆ ಪರಿಣಾಮ ಬೀರುವ ಎಫ್‌ಡಿಪಿ ಸಂಖ್ಯೆ: 4/2010ರ ಪ್ರಕಾರ ಮುಂದುವರಿಯುವುದರಿಂದ ಪ್ರತಿವಾದಿ ಸಂಖ್ಯೆ: 1ರಿಂದ 3 ಇವರನ್ನು ನಿರ್ಬಂಧಿಸಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಹಾಗೂ ಅದರಲ್ಲಿನ ಪಕ್ಷಕಾರರನ್ನು ಗಡಿಗಳು ಮತ್ತು ಗಡಿಕಲ್ಲುಗಳ ಮೂಲಕ ಅರ್ಧ ಪಾಲಿನ ಸ್ವಾಧೀನದಲ್ಲಿ ಇರಿಸಲು, ಇದರಲ್ಲಿನ ಅಪೀಲುದಾರರು ಒ.ಎಸ್. ಸಂಖ್ಯೆ: 502/2012ನ್ನು ಸಲ್ಲಿಸಿದ್ದಾರೆ.

ಮೊದಲ ಹಂತದಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಗಳಿಗೆ ನೋಟೀಸನ್ನು ನೀಡದೆ, ಕಚೇರಿಯು ಎತ್ತಿದ ಆಕ್ಷೇಪಣೆಗಳ ಆಧಾರದ ಮೇಲೆ ವಾದಿಗಳ ವಾದವನ್ನು ಆಲಿಸಿ, ದಾವೆಯು ಸಮರ್ಥನೀಯವಾದುದಲ್ಲವೆಂದು ನಿರ್ಣಯಿಸಿ ಆದೇಶವನ್ನು ಹೊರಡಿಸಿದೆ ಹಾಗೂ ವಾದಿಗಳಿಗೆ ವಾದಪತ್ರವನ್ನು ಹಿಂತಿರುಗಿಸಲು ಆದೇಶಿಸಿದೆ. ಸದರಿ ಆದೇಶದಿಂದ ಬಾಧಿತರಾಗಿ ವಾದಿಗಳು, ನಿಯತ ಅಪೀಲನ್ನು ಮಂಡಿಸುವ

*ನಿಯತ ಎರಡನೇ ಅಪೀಲು ಸಂಖ್ಯೆ: 573/2016 (ಡಿಇಸಿ/ಐಎನ್‌ಜೆ), ದಿನಾಂಕ 9ನೇ ಜುಲೈ, 2018.

ಮೂಲಕ ಪ್ರಥಮ ಅಪೀಲು ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ. ಪ್ರಥಮ ಅಪೀಲು ನ್ಯಾಯಾಲಯವು ಈ ಮುಂದಿನ ಅಂಶಗಳನ್ನು ಪರಿಗಣನೆಗಾಗಿ ರೂಪಿಸಿದೆ:

i) ದಾವೆಯ ಸಮರ್ಥನೀಯತೆಯ ಆಧಾರದ ಮೇಲೆ ದಿನಾಂಕ: 04.02.2013ರ ಆದೇಶದಲ್ಲಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಗಳು ತಪ್ಪಾಗಿವೆಯೇ ಮತ್ತು ಅಪೀಲಿನ ಕಾರಣಗಳಲ್ಲಿ ಅಪೀಲುದಾರರು ಒತ್ತಾಯಿಸಿದಂತೆ ಕಾನೂನಿಗೆ ವಿರುದ್ಧವಾಗಿವೆಯೇ?

ii) ಅಧಿವಿಚಾರಣಾ ನ್ಯಾಯಾಲಯದ ಆದೇಶ ಕುರಿತಂತೆ, ಈ ನ್ಯಾಯಾಲಯವು ಮಧ್ಯಪ್ರವೇಶಿಸುವ ಅಗತ್ಯವಿದೆಯೇ?

iii) ಆದೇಶ ಅಥವಾ ಡಿಕ್ರಿ ಏನು?

ಪ್ರಥಮ ಅಪೀಲು ನ್ಯಾಯಾಲಯವು ಸಹ ನಿಯತ ಅಪೀಲು ಸಂಖ್ಯೆ: 100/2013ರಲ್ಲಿನ ಅಪೀಲನ್ನು ವಜಾಗೊಳಿಸಿದ್ದು, ತತ್ಪರಿಣಾಮವಾಗಿ ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿದಿದೆ.

ಈರ್ವರು ಪಕ್ಷಕಾರರ ಪರ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಆಲಿಸಿದ ಮತ್ತು ನ್ಯಾಯಾಲಯದ ಮುಂದೆ ಮಂಡಿಸಿದ ದಾಖಲೆಗಳನ್ನು ಪರಿಶೀಲಿಸಿದ ಹಾಗೂ ಇತರ ಉಚ್ಚ ನ್ಯಾಯಾಲಯಗಳು ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಹಿಂದಿನ ಆದೇಶಗಳನ್ನು ಪರಾಮರ್ಶಿಸಿದ ನಂತರ, ಈ ನ್ಯಾಯಾಲಯವು ಪರಿಗಣಿಸಬೇಕಾದ ಮುಖ್ಯ ಪ್ರಶ್ನೆ ಎಂದರೆ, "ಮೃತ ವ್ಯಕ್ತಿಯ ವಿರುದ್ಧ ಹೊರಡಿಸಿದ ಡಿಕ್ರಿಯು ಅಕೃತವಾಗಿದೆ ಮತ್ತು ಹಾಗಾಗಿ ಡಿಕ್ರಿಯನ್ನು ಮೃತ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿಧಿಗಳ ಮೇಲೆ ಜಾರಿಗೊಳಿಸಲಾಗುವುದಿಲ್ಲ ಎಂಬ ಘೋಷಣೆಯನ್ನು ಕೋರಿ, ಮೃತ ಪ್ರತಿವಾದಿಯ ಕಾನೂನು ಪ್ರತಿನಿಧಿಗಳು ಪ್ರತ್ಯೇಕ ದಾವೆಯನ್ನು ನಿರ್ವಹಿಸಬಹುದಾಗಿತ್ತೇ?" ಎಂಬುದಾಗಿದೆ.

ಚರ್ಚೆಯ ಹಿನ್ನಲೆಯಲ್ಲಿ, ದಾವೆಯನ್ನು ಹೂಡಲಾಗುವುದಿಲ್ಲವೆಂದು ನಿರ್ಧರಿಸಿ ಕೆಳ ನ್ಯಾಯಾಲಯಗಳು ಹೊರಡಿಸಿದ ತೀರ್ಪುಗಳು ಕಾನೂನಿಗೆ ವಿರುದ್ಧವಾಗಿವೆ ಮತ್ತು ಅದರಿಂದ ಅವುಗಳನ್ನು ತಳ್ಳಿಹಾಕಲಾಗಿದೆ. ತದನುಸಾರ ಅಪೀಲು ಸಲ್ಲಿಸಲು ಅವಕಾಶ ನೀಡಲಾಗಿದ್ದು, ದಾವೆಯನ್ನು ಹೂಡಲಾಗುವುದಿಲ್ಲವೆಂಬ ಕಾರಣದ ಮೇಲೆ ಪ್ರತಿವಾದಿಗಳಿಗೆ ನೋಟೀಸನ್ನು ನೀಡದೆ ದಾವೆಯನ್ನು ವಜಾಗೊಳಿಸಿರುವುದರಿಂದ, ಈರ್ವರೂ ಪಕ್ಷಕಾರರಿಗೆ ಅವಕಾಶವನ್ನು ನೀಡಿ ಗುಣಾರ್ಹತೆಗಳನ್ನು ಮರು-ಆಲಿಸಬೇಕೆಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

ವ್ಯಯ ಮಾಡಿದ ಸಮಯವನ್ನು ಮತ್ತು ಅಂತಿಮ ಡಿಕ್ರಿ ವ್ಯವಹರಣೆಗಳು ವಿಚಾರಣಾ ನ್ಯಾಯಾಲಯದ ಮುಂದೆ ಪ್ರಗತಿಯಲ್ಲಿರುವುದನ್ನು ಗಮನದಲ್ಲಿರಿಸಿಕೊಂಡು, ವಿಚಾರಣೆಯನ್ನು ಪೂರ್ಣಗೊಳಿಸಿ, ಇಂದಿನಿಂದ ಒಂದು ವರ್ಷದ ಅವಧಿಯೊಳಗೆ ತೀರ್ಪನ್ನು ಹೊರಡಿಸಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. (2004) 1 ಎಸ್‌ಸಿಸಿ 317*
*ಖೇತ್ರಬಾಸಿ ಬಿಸ್ವಾಲ್ -ವಿರುದ್ಧ-*
*ಅಜಯ್ ಕುಮಾರ್ ಬರಾಲ ಮತ್ತು ಇತರರು (ಉಲ್ಲೇ) 6*
*2. 1981 ಐಎಲ್ಆರ್ ಕೆಎಆರ್ 342*
*ಖಾದಿರ್ ಸಾಹೇಬ್ ಜಾಫರ್ ಸಾಹೇಬ್ ನಾಗರಬೌಡಿ,*
*ಮೃತರಾಗಿದ್ದು ಕಾನೂನು ಪ್ರತಿನಿಧಿಗಳು ಪ್ರತಿನಿಧಿಸಿದ್ದಾರೆ*
*-ವಿರುದ್ಧ- ಅಮೀನ್ ಸಾಹೇಬ್ ಹುಸೇನ್ ಸಾಹೇಬ್*
*ಇನಾಮ್‌ದಾರ್, ಮೃತರಾಗಿದ್ದು ಕಾನೂನು ಪ್ರತಿನಿಧಿಗಳು (ಉಲ್ಲೇ) 6*
*3. ಎಐಆರ್ 1962 ಎಸ್‌ಸಿ 89*
*ಪಂಜಾಬ್ ರಾಜ್ಯ -ವಿರುದ್ಧ- ನಾಥು ರಾಮ್ (ಉಲ್ಲೇ) 6*

4. *1974 ಎಸ್‌ಸಿಸಿ ಆನ್‌ಲೈನ್ ಕೆಎಆರ್ 203:*
*(1975) 1 ಕೆಎಎನ್‌ಟಿ ಎಲ್‌ಜೆ 143*
*ಅಜೀಜ್ ಮತ್ತು ಕಂಪನಿ –ವಿರುದ್ಧ–*
*ಮರಿತಿಮ್ಮಯ್ಯ* *(ಉಲ್ಲೇ) 6*
5. *ಎಐಆರ್ 1992 ಮದ್ರಾಸ್ 159*
*ಎಲಿಸಾ ಮತ್ತು ಇತರರು –ವಿರುದ್ಧ– ಎ. ದಾಸ್* *(ಉಲ್ಲೇ) 6*
6. *ಎಐಆರ್ 1984 ಕರ್ನಾಟಕ (1)*
*ಗುರುಬಸಪ್ಪ ಸಿದ್ಧಪ್ಪ ಕಂಪ್ಲಿ (ಮೃತರಾಗಿದ್ದು*
*ಕಾನೂನು ಪ್ರತಿನಿಧಿಗಳು ಪ್ರತಿನಿಧಿಸಿದ್ದಾರೆ)*
*ಮತ್ತು ಇನ್ನೊಬ್ಬರು –ವಿರುದ್ಧ– ನಾಗೇಂದ್ರಪ್ಪ*
*ವೀರಭದ್ರಪ್ಪ ಅಂಗಡಿ (ಮೃತರಾಗಿದ್ದು ಕಾನೂನು*
*ಪ್ರತಿನಿಧಿಗಳು ಪ್ರತಿನಿಧಿಸಿದ್ದಾರೆ)* *(ಉಲ್ಲೇ) 6*
7. *ಐಎಲ್‌ಆರ್ 1931 ಅಲಹಾಬಾದ್ 25*
*ಮಹಾಬೀರ್ ಸಿಂಗ್ –ವಿರುದ್ಧ– ದೀಪ್ ನರೇನ್*
*ತಿವಾರಿ ಮತ್ತು ಇತರರು ಹಾಗೂ ಚಾಂದಿ ತಿವಾರಿ* *(ಉಲ್ಲೇ) 10*
8. *ಬೇಣಿ ಪ್ರಸಾದ್ ಕನ್ವರ್ –ವಿರುದ್ಧ– ಮುಕ್ತೆಸರ್ ರಾಯಿ* *(ಉಲ್ಲೇ) 11*
9. *ಗೋಪಿ ನರೇನ್ ಖೌನಾ –ವಿರುದ್ಧ– ಬನ್ಸಿಧರ್* *(ಉಲ್ಲೇ) 14*
10. *ಐಎಲ್‌ಆರ್ 1935 ಕಲ್ಕತ್ತ 472*
*ಅಬ್ದುಲ್ ರಹೀಮ್ –ವಿರುದ್ಧ– ಎಝಿಕೀಲ್* *(ಉಲ್ಲೇ) 19*
11. *(1919) 4 ಪಾಟ್ನಾ ಎಲ್.ಜೆ. 240*
*ಜಂಗ್ಲಿ ಲಾಲ್ –ವಿರುದ್ಧ– ಲಡ್ಡು ರಾಮ್ ಮಾರವಾರಿ* *(ಉಲ್ಲೇ) 19*
12. *(1916) ಐಎಲ್‌ಆರ್ 44 ಸಿಎಎಲ್ 627*
*ಕಾಲಿಪದಾ ಸರ್ಕಾರ್ –ವಿರುದ್ಧ–*
*ಹರಿ ಮೋಹನ್ ದಲಾಲ್* *(ಉಲ್ಲೇ) 19*

13. *ಎಐಆರ್ 1958 ಎಪಿ (1):*
*1957 ಎಸ್‌ಸಿಸಿ ಆನ್‌ಲೈನ್ ಎಪಿ 225*
*ಎ. ವೆಂಕಟಸೆಶಯ್ಯ ಮತ್ತು ಇತರರು -ವಿರುದ್ಧ-*
*ಎ. ವೀರಯ್ಯ ಮತ್ತು ಇತರರು (ಉಲ್ಲೇ) 21*
14. *(2001) 6 ಎಸ್‌ಸಿಸಿ 534*
*ಧುರಂಧರ್ ಪ್ರಸಾದ್ ಸಿಂಗ್ -ವಿರುದ್ಧ-*
*ಜೈ ಪ್ರಕಾಶ್ ವಿಶ್ವವಿದ್ಯಾನಿಲಯ ಮತ್ತು ಇತರರು (ಉಲ್ಲೇ) 24*
15. *ಕಿರಣ್ ಸಿಂಗ್ -ವಿರುದ್ಧ- ಚಮನ್ ಪಾಸ್ವಾನ್ (ಉಲ್ಲೇ) 26*
16. *ವಾಸುದೇವ್ ಧಂಜಿಭಾಯಿ ಮೋದಿ -ವಿರುದ್ಧ-*
*ರಾಜಾಭಾಯಿ ಅಬ್ದುಲ್ ರೆಹಮಾನ್ (ಉಲ್ಲೇ) 27*
17. *(1965) 2 ಎಎಲ್ಎಲ್ ಇಆರ್ 836*
*ಆರ್. -ವಿರುದ್ಧ- ಪದ್ದಿಂಗ್ಟನ್ ವ್ಯಾಲ್ಯೂಯೇಷನ್*
*ಆಫೀಸರ್, ಇಎಕ್ಸ್. ಪಿ. ಪೀಚೆ ಪ್ರಾಪರ್ಟಿ*
*ಕಾರ್ಪೊರೇಷನ್ ಲಿಮಿಟೆಡ್ (ಉಲ್ಲೇ) 28*
18. *(2002) 9 ಎಸ್‌ಸಿಸಿ 28*
*ಒಡಿಸ್ಸಾ ಸರ್ಕಾರ -ವಿರುದ್ಧ-*
*ಅಶೋಕ್ ಟ್ರಾನ್ಸ್‌ಪೋರ್ಟ್ ಏಜನ್ಸಿ ಮತ್ತು ಇತರರು (ಉಲ್ಲೇ) 32*
19. *(2017) 13 ಎಸ್‌ಸಿಸಿ 414*
*ಗುರ್‌ನಾಮ್ ಸಿಂಗ್ -ವಿರುದ್ಧ- ಗುರುಬಚನ್ ಕೌರ್*
*(ಮೃತ) ಕಾನೂನು ಪ್ರತಿನಿಧಿಗಳ ಮೂಲಕ (ಉಲ್ಲೇ) 35*

ಅರ್ಜಿದಾರರ ಪರ : ಶ್ರೀ ಜಿ. ಪಾಪಿ ರೆಡ್ಡಿ, ನ್ಯಾಯವಾದಿ.
ಆಕ್ಷೇಪಕ/ಪ್ರತ್ಯರ್ಜಿದಾರ ಸಂಖ್ಯೆ 1 ಮತ್ತು 2 ಪರ : ಶ್ರೀ ಜಿ.ವಿ. ಶಶಿಕುಮಾರ್, ನ್ಯಾಯವಾದಿ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಆರ್. ದೇವದಾಸ್ (ಮೌಖಿಕ):**

ದಿನಾಂಕ: 24.05.1999ರಂದು ಒ.ಎಸ್. ಸಂಖ್ಯೆ: 257/1992ರಲ್ಲಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹೊಸಕೋಟೆ ಇವರು ಹೊರಡಿಸಿದ ಅಧಿವಿಚಾರಣಾ ನ್ಯಾಯಾಲಯದ ಹಾಗೂ ದಿನಾಂಕ: 19.12.2015ರಂದು ನಿಯತ ಅಪೀಲು ಸಂಖ್ಯೆ: 100/2013ರಲ್ಲಿ IIನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮೀಣ ಜಿಲ್ಲೆ, ಬೆಂಗಳೂರು ಇವರು ಸಮರ್ಥನೀಯತೆಯ ಕಾರಣದ ಮೇಲೆ ಇದರಲ್ಲಿನ ಅಪೀಲುದಾರರು ಸಲ್ಲಿಸಿದ ದಾವೆಯನ್ನು ಅದು ವಜಾಗೊಳಿಸಿ ಹೊರಡಿಸಿದ ಪ್ರಥಮ ಅಪೀಲು ನ್ಯಾಯಾಲಯದ ತೀರ್ಪುಗಳ ವಿರುದ್ಧ ಈ ನಿಯತ ಎರಡನೇ ಅಪೀಲನ್ನು ನಿರ್ದೇಶಿಸಲಾಗಿದೆ.

2. ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

ಒ.ಎಸ್. ಸಂಖ್ಯೆ: 257/1992 ಇದನ್ನು ಹೆಚ್.ಎನ್. ಮುನಿಸ್ವಾಮಿ ಗೌಡ ಈತನು ತನ್ನ ಸಹೋದರನ ಪತ್ನಿ ಮತ್ತು ಮಕ್ಕಳ ವಿರುದ್ಧ ಸಲ್ಲಿಸಿದ್ದಾನೆ. ಪ್ರತಿವಾದಿ ಸಂಖ್ಯೆ: 6 ಈತನು, ಇದರಲ್ಲಿನ ಅರ್ಜಿದಾರ ಸಂಖ್ಯೆ: 1 ಈಕೆಯ ಪತಿ ಮತ್ತು ಅಪೀಲುದಾರ ಸಂಖ್ಯೆ: 2 ಮತ್ತು 3 ಇವರ ತಂದೆಯಾಗಿದ್ದಾನೆ. ಆಸ್ತಿ ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ಈ ದಾವೆಯನ್ನು ಸಲ್ಲಿಸಲಾಗಿದೆ. ಒಪ್ಪಿಕೊಂಡಿರುವಂತೆ, ಡಿಕ್ರಿಯನ್ನು ಹೊರಡಿಸುವ ಮೊದಲೇ ಪ್ರತಿವಾದಿ ಸಂಖ್ಯೆ: 6 ಮೃತನಾಗಿದ್ದಾನೆ. ಮೃತ ಪ್ರತಿವಾದಿ ಸಂಖ್ಯೆ: 6 ಈತನ ಕಾನೂನುಬದ್ಧ ಪ್ರತಿನಿಧಿಗಳ ಹೆಸರನ್ನು ದಾಖಲೆಗೆ ತರುವ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

3. ಒ.ಎಸ್. ಸಂಖ್ಯೆ: 257/1992ರಲ್ಲಿ ಹೊರಡಿಸಿದ ದಿನಾಂಕ: 24.05.1999ರ ಪ್ರಾಥಮಿಕ ಡಿಕ್ರಿಯು ಅಕೃತತೆಯಿಂದ ಕೂಡಿದ್ದು, ಅದು ಅಪ್ರವರ್ತನೀಯವಾದುದಾಗಿದೆ; ಹಾಗೂ ದಾವೆ ನಿಗದಿತ ಸ್ವತ್ತುಗಳ ವಿಭಜನೆಯ ಮೇಲೆ ಪರಿಣಾಮ ಬೀರುವ ಎಫ್‌ಡಿಪಿ ಸಂಖ್ಯೆ: 4/2010ರ ಪ್ರಕಾರ ಮುಂದುವರಿಯುವುದರಿಂದ ಪ್ರತಿವಾದಿ ಸಂಖ್ಯೆ: 1ರಿಂದ 3 ಇವರನ್ನು ನಿರ್ಬಂಧಿಸಿ ಶಾಶ್ವತ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಹಾಗೂ ಅದರಲ್ಲಿನ ಪಕ್ಷಕಾರರನ್ನು ಗಡಿಗಳು ಮತ್ತು ಗಡಿಕಲ್ಲುಗಳ ಮೂಲಕ ಅರ್ಧ ಪಾಲಿನ ಸ್ವಾಧೀನದಲ್ಲಿ ಇರಿಸಲು, ಇದರಲ್ಲಿ ಅಪೀಲುದಾರರು ಒ.ಎಸ್. ಸಂಖ್ಯೆ: 502/2012ನ್ನು ಸಲ್ಲಿಸಿದ್ದಾರೆ.

4. ಮೊದಲ ಹಂತದಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಗಳಿಗೆ ನೋಟೀಸನ್ನು ನೀಡದೆ, ಕಚೇರಿಯು ಎತ್ತಿದ ಆಕ್ಷೇಪಣೆಗಳ ಆಧಾರದ ಮೇಲೆ ವಾದಿಗಳ ವಾದವನ್ನು ಆಲಿಸಿ, ದಾವೆಯು ಸಮರ್ಥನೀಯವಾದುದಲ್ಲವೆಂದು ನಿರ್ಣಯಿಸಿ ಆದೇಶವನ್ನು ಹೊರಡಿಸಿದೆ ಹಾಗೂ ವಾದಿಗಳಿಗೆ ವಾದಪತ್ರವನ್ನು ಹಿಂತಿರುಗಿಸಲು ಆದೇಶಿಸಿದೆ. ಸದರಿ ಆದೇಶದಿಂದ ಬಾಧಿತರಾಗಿ ವಾದಿಗಳು, ನಿಯತ ಅಪೀಲನ್ನು ಮಂಡಿಸುವ ಮೂಲಕ ಪ್ರಥಮ ಅಪೀಲು ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ. ಪ್ರಥಮ ಅಪೀಲು ನ್ಯಾಯಾಲಯವು ಈ ಮುಂದಿನ ಅಂಶಗಳನ್ನು ಪರಿಗಣನೆಗಾಗಿ ರೂಪಿಸಿದೆ:

i) ದಾವೆಯ ಸಮರ್ಥನೀಯತೆಯ ಆಧಾರದ ಮೇಲೆ ದಿನಾಂಕ: 04.02.2013ರ ಆದೇಶದಲ್ಲಿ ಅಧಿವಿಚಾರಣಾ ನ್ಯಾಯಾಲಯವು ನೀಡಿದ ನಿರ್ಣಯಗಳು ತಪ್ಪಾಗಿವೆಯೇ ಮತ್ತು ಅಪೀಲಿನ ಕಾರಣಗಳಲ್ಲಿ ಅಪೀಲುದಾರರು ಒತ್ತಾಯಿಸಿದಂತೆ ಕಾನೂನಿಗೆ ವಿರುದ್ಧವಾಗಿವೆಯೇ?

ii) ಅಧಿವಿಚಾರಣಾ ನ್ಯಾಯಾಲಯದ ಆದೇಶ ಕುರಿತಂತೆ, ಈ ನ್ಯಾಯಾಲಯವು ಮಧ್ಯಪ್ರವೇಶಿಸುವ ಅಗತ್ಯವಿದೆಯೇ?

iii) ಆದೇಶ ಅಥವಾ ಡಿಕ್ರಿ ಏನು?

5. ಪ್ರಥಮ ಅಪೀಲು ನ್ಯಾಯಾಲಯವು ಸಹ ನಿಯತ ಅಪೀಲು ಸಂಖ್ಯೆ: 100/2013ರಲ್ಲಿನ ಅಪೀಲನ್ನು ವಜಾಗೊಳಿಸಿದ್ದು, ತತ್ಪರಿಣಾಮವಾಗಿ ಅಧಿವಿಚಾರಣಾ ನ್ಯಾಯಾಲಯದ ತೀರ್ಮಾನವನ್ನು ಎತ್ತಿಹಿಡಿದಿದೆ.

6. ಶ್ರೀ ಜಿ. ಪಾಪಿ ರೆಡ್ಡಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಈ ಮುಂದಿನ ತೀರ್ಪುಗಳನ್ನು ಅವಲಂಬಿಸಿ, ಪ್ರಥಮ ಅಪೀಲು ನ್ಯಾಯಾಲಯವು ತಿಳಿಸಿದ ಕಾರಣವು ತಪ್ಪಾದುದಾಗಿದೆ ಮತ್ತು ದಾವೆಯನ್ನು ಸಮರ್ಥನೀಯವಲ್ಲವೆಂದು ವಜಾಗೊಳಿಸಬಾರದಾಗಿತ್ತು ಎಂದು ನಿವೇದಿಸಿಕೊಂಡಿದ್ದಾರೆ:

i) ***ಖೇತ್ರಬಾಸಿ ಬಿಸ್ವಾಲ್ –ವಿರುದ್ಧ– ಅಜಯ್ ಕುಮಾರ್ ಬರಾಲ ಮತ್ತು ಇತರರು***[1];

ii) ***ಖಾದಿರ್ ಸಾಹೇಬ್ ಜಾಫರ್ ಸಾಹೇಬ್ ನಾಗರಬೌಡಿ, ಮೃತರಾಗಿದ್ದು ಕಾನೂನು ಪ್ರತಿನಿಧಿಗಳು –ವಿರುದ್ಧ– ಅಮೀನ್ ಸಾಹೇಬ್ ಹುಸೇನ್ ಸಾಹೇಬ್ ಇನಾಮ್‌ದಾರ್, ಮೃತರಾಗಿದ್ದು ಕಾನೂನು ಪ್ರತಿನಿಧಿಗಳು***[2];

iii) ***ಪಂಜಾಬ್ ರಾಜ್ಯ –ವಿರುದ್ಧ– ನಾಥು ರಾಮ್***[3];

1. (2004) 1 ಎಸ್‌ಸಿಸಿ 317
2. 1981 ಐಎಲ್‌ಆರ್ ಕೆಎಆರ್ 342
3. ಎಐಆರ್ 1962 ಎಸ್‌ಸಿ 89

iv) ***ಅಜೀಜ್ ಮತ್ತು ಕಂಪನಿ –ವಿರುದ್ಧ– ಮರಿತಿಮ್ಮಯ್ಯ***[4],

v) ***ಎಲಿಸಾ ಮತ್ತು ಇತರರು –ವಿರುದ್ಧ– ಎ. ದಾಸ್***[5];

vi) ***ಗುರುಬಸಪ್ಪ ಸಿದ್ಧಪ್ಪ ಕಂಪ್ಲಿ (ಮೃತರಾಗಿದ್ದು ಕಾನೂನು ಪ್ರತಿನಿಧಿಗಳು ಪ್ರತಿನಿಧಿಸಿದ್ದಾರೆ) ಮತ್ತು ಇನ್ನೊಬ್ಬರು –ವಿರುದ್ಧ– ನಾಗೇಂದ್ರಪ್ಪ ವೀರಭದ್ರಪ್ಪ ಅಂಗಡಿ (ಮೃತರಾಗಿದ್ದು ಕಾನೂನು ಪ್ರತಿನಿಧಿಗಳು ಪ್ರತಿನಿಧಿಸಿದ್ದಾರೆ***[6]***).***

7. ನಿರ್ದಿಷ್ಟ ಪರಿಹಾರ ಅಧಿನಿಯಮದ 34ನೇ ಮತ್ತು 41ನೇ ಪ್ರಕರಣಗಳ ಅಭಿಪ್ರಾಯದಲ್ಲಿ, ವಾದಿಗಳು ಕೋರಿರುವ ಘೋಷಣೆಯನ್ನು ನೀಡಲು ಸಾಧ್ಯವಿಲ್ಲದ್ದರಿಂದ ಕೆಳ ನ್ಯಾಯಾಲಯಗಳು ದಾವೆಯನ್ನು ಸರಿಯಾಗಿಯೇ ವಜಾಗೊಳಿಸಿವೆ ಮತ್ತು ದಾವೆಯನ್ನು ಸಮರ್ಥನೀಯವಲ್ಲವೆಂದು ಸರಿಯಾಗಿಯೇ ವಜಾಗೊಳಿಸಿವೆ ಎಂದು ಆಕ್ಷೇಪಕ–ಪ್ರತಿವಾದಿ ಸಂಖ್ಯೆ: 1 ಮತ್ತು 2 ಇವರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ಜಿ.ವಿ. ಶಶಿ ಕುಮಾರ್ ಇವರು ನಿವೇದಿಸಿಕೊಂಡಿದ್ದಾರೆ. ಅಲ್ಲದೆ ಅವರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಅಭಿಪ್ರಾಯದಲ್ಲಿ, ವಾದಿಗಳು ನಿಯತ ಅಪೀಲನ್ನು ಸಲ್ಲಿಸುವ ಮೂಲಕ ಅಪೀಲು ನ್ಯಾಯಾಲಯವನ್ನು ಸಂಪರ್ಕಿಸಬೇಕು ಹಾಗೂ ಡಿಕ್ರಿ ಅಕೃತತೆಯಿಂದ ಕೂಡಿದೆ ಎಂಬ ಘೋಷಣೆಯನ್ನು ಕೋರಿ ಹೂಡಿದ ಪ್ರತ್ಯೇಕ ದಾವೆಯು ಸಮರ್ಥನೀಯವಾಗಿಲ್ಲವೆಂದು ಅಧಿವಿಚಾರಣಾ ನ್ಯಾಯಾಲಯವು ಸರಿಯಾಗಿಯೇ ನಿರ್ಣಯಿಸಿದೆ ಎಂದು ನಿವೇದಿಸಿಕೊಂಡಿದ್ದಾರೆ. ಇದಲ್ಲದೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣದ ಅಭಿಪ್ರಾಯದಲ್ಲಿ, ವಾದಿಗಳು, ಅಂತಿಮ ಡಿಕ್ರಿ ವ್ಯವಹರಣೆಗಳಲ್ಲಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ತಮ್ಮ ಆಕ್ಷೇಪಣೆಗಳನ್ನು

4. 1974 ಎಸ್‌ಸಿಸಿ ಆನ್‌ಲೈನ್ ಕೆಎಆರ್ 203 ಅಥವಾ (1975) 1 ಕೆಎಎನ್‌ಟಿ ಎಲ್‌ಜೆ 143

5. ಎಐಆರ್ 1992 ಮದ್ರಾಸ್ 159

6. ಎಐಆರ್ 1984 ಕರ್ನಾಟಕ (1)

ಎತ್ತಬಾರದಾಗಿತ್ತು ಮತ್ತು ಪ್ರತ್ಯೇಕ ದಾವೆ ಸಮರ್ಥನೀಯವಾದುದಲ್ಲವೆಂದು ವಾದಿಸಿದ್ದಾರೆ.

8. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಯಿತು.

9. ಈ ಅಪೀಲಿನಲ್ಲಿ ಪರಿಗಣನೆಗೆ ಉದ್ಭವಿಸುವ ಮುಖ್ಯ ಪ್ರಶ್ನೆ ಎಂದರೆ – "ಮೃತ ವ್ಯಕ್ತಿಯ ವಿರುದ್ಧ ಹೊರಡಿಸಿದ ಡಿಕ್ರಿಯು ಅಕೃತವಾಗಿದೆ ಮತ್ತು ಹಾಗಾಗಿ ಡಿಕ್ರಿಯನ್ನು ಮೃತ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿಧಿಗಳ ಮೇಲೆ ಜಾರಿಗೊಳಿಸಲಾಗುವುದಿಲ್ಲ ಎಂಬ ಘೋಷಣೆಯನ್ನು ಕೋರಿ, ಮೃತ ಪ್ರತಿವಾದಿಯ ಕಾನೂನು ಪ್ರತಿನಿಧಿಗಳು ಪ್ರತ್ಯೇಕ ದಾವೆಯನ್ನು ನಿರ್ವಹಿಸಬಹುದಾಗಿತ್ತೇ?"

10. ***ಮಹಾಬೀರ್ ಸಿಂಗ್ –ವಿರುದ್ಧ– ದೀಪ್ ನರೇನ್ ತಿವಾರಿ ಮತ್ತು ಇತರರು ಹಾಗೂ ಚಾಂದಿ ತಿವಾರಿ***[7], ಮೊಕದ್ದಮೆಯಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು ಇಂಥಹುದೇ ಪ್ರಶ್ನೆಯನ್ನು, ಎಂದರೆ ದಾವೆಯು ಕೊನೆಗೊಳ್ಳುವ ಮೊದಲೇ ಮೃತನಾಗಿದ್ದ ಮೃತ ಪ್ರತಿವಾದಿಯ ವಾರಸುದಾರರು ಮತ್ತು ನಿಗದಿತ ಅವಧಿಯೊಳಗೆ ಎಂದಿಗೂ ದಾಖಲೆಯಲ್ಲಿ ತರದಿದ್ದಂಥ ಆತನ ವಾರಸುದಾರರು, ತಮ್ಮ ಪೂರ್ವಿಕನ ವಿರುದ್ಧ ಎಂದಿಗೂ ಡಿಕ್ರಿಯನ್ನು ಹೊರಡಿಸಿರಲಿಲ್ಲವೇ ಹಾಗೂ ಅವರ ವಿರುದ್ಧ ಇದ್ದಂತೆ ಅದು ಅಕೃತ ಮತ್ತು ಶೂನ್ಯವೆ? ಅವರನ್ನು ದಾವೆಯ ಪಕ್ಷಕಾರನ ಪ್ರತಿನಿಧಿಗಳೆಂದು ಪರಿಭಾವಿಸಬೇಕೇ ಮತ್ತು ಜಾರಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಎತ್ತಬೇಕಿತ್ತೇ, ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಡಿಕ್ರಿಯನ್ನು ರದ್ದುಗೊಳಿಸಬೇಕೇ ಅಥವಾ ತೀರಿಸಬೇಕೇ ಎಂಬ ಪ್ರಶ್ನೆಯನ್ನು ಪರಿಗಣಿಸುತ್ತಾ, ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣದ ಅಡಿಯಲ್ಲಿ ಮೃತ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿಧಿಗಳು ಆಕ್ಷೇಪಣೆಯನ್ನು ಎತ್ತಬಹುದೇ ಎಂಬ ಪ್ರಶ್ನೆ ಕುರಿತು ವ್ಯವಹರಿಸುವಾಗ, ಮಾನ್ಯ

7. ಐಎಲ್ಆರ್ 1931 ಅಲಹಾಬಾದ್ 25

ನ್ಯಾಯಾಧೀಶರಾಗಿದ್ದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸುಲೈಮಾನ್ ಅವರು ಈ ಮುಂದಿನಂತೆ ತೀರ್ಪು ನೀಡಿದ್ದಾರೆ:

> *"ದಾವೆಯು ಪಕ್ಷಕಾರರ ನಡುವೆ ಉದ್ಭವಿಸಿದೆ" ಎಂಬ ಅಭಿವ್ಯಕ್ತಿಯು ಸಂಶಯಾತೀತವಾಗಿ, ಅವರು ದಾವೆಗೆ ಪಕ್ಷಕಾರರಾಗಿರುವುದು, ಪ್ರಶ್ನೆ ಉದ್ಭವಿಸಿರುವ ಯಾವುದೇ ಪ್ರಮಾಣದಲ್ಲಿ, ಯಾವುದೇ ಹಂತದವರೆಗೆ ಮುಂದುವರಿಯುತ್ತದೆ ಎಂಬುದನ್ನು ಪರ್ಯಾಲೋಚಿಸುತ್ತದೆ. 'ಉದ್ಭವಿಸಿದ' ಎಂಬ ಪದವನ್ನು ವರ್ತಮಾನ ಕೃದ್ವಾಚಿ ಪದವನ್ನಾಗಿ ಬಳಸಲಾಗಿದೆ ಮತ್ತು 'ದಾವೆಯು ಪಕ್ಷಕಾರರ ನಡುವೆ ಉದ್ಭವಿಸಿದ' ಎಂಬ ಅಭಿವ್ಯಕ್ತಿಯನ್ನು ದಾವೆಯ ಪಕ್ಷಕಾರನಾಗಿರುವ ಒಬ್ಬನ ಮತ್ತು ನ್ಯಾಯಾಲಯದ ಆದೇಶದ ಮೂಲಕ ಅದಕ್ಕೆ ಪಕ್ಷಕಾರನಾಗಿರುವುದು ಕೊನೆಗೊಂಡಿರುವ ಇನ್ನೊಬ್ಬನ ನಡುವೆ ಉದ್ಭವಿಸಿದ ಪ್ರಶ್ನೆಗೆ ಉಲ್ಲೇಖಿಸುವುದಾದರೆ ಅದು ಸೂಕ್ತವಾಗುವುದಿಲ್ಲ.............*
>
> *............ ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಹೊಸ ಪ್ರಕರಣಕ್ಕೆ ಸಂಸತ್ತು ವಿವರಣೆಯನ್ನು ಸೇರಿಸಿದ್ದು, ಅದು, ಪ್ರಕರಣದ ವ್ಯಾಪ್ತಿಯ ಒಳಗೆ ಯಾವ ಪ್ರತಿವಾದಿಯ ವಿರುದ್ಧ ದಾವೆಯನ್ನು ವಜಾಗೊಳಿಸಲಾಗಿದೆಯೋ ಆ ಪ್ರತಿವಾದಿಯನ್ನು ದಾಖಲೆಗೆ ತರುತ್ತದೆ. ಆದರೆ, ಯಾವ ಪ್ರತಿವಾದಿಯ ಹೆಸರನ್ನು ದಾವೆಯಿಂದ ವಿನಾಯಿತಿಗೊಳಿಸಲಾಗಿದೆಯೋ ಮತ್ತು ದಾಖಲೆಯಿಂದ ತೆಗೆದುಹಾಕಲಾಗಿದೆಯೋ ಅಥವಾ ಆತನ ವಾರಸುದಾರರನ್ನು ಎಂದಿಗೂ ಸೇರಿಸಲಾಗುವುದಿಲ್ಲವೋ, ಆ ಪ್ರತಿವಾದಿಯು ಮೊಕದ್ದಮೆಯನ್ನು ಒಳಗೊಳ್ಳುವ ಹಾಗೆ, ವಿನಾಯಿತಿಯು ನಮ್ಮನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದಿಲ್ಲ".*

11. ಮಾನ್ಯ ನ್ಯಾಯಮೂರ್ತಿಗಳು ***ಬೇಣಿ ಪ್ರಸಾದ್ ಕನ್ವರ್ –ವಿರುದ್ಧ– ಮುಕ್ತೆಸರ್ ರಾಯಿ***[8] ಮೊಕದ್ದಮೆಯಲ್ಲಿನ ಮತ್ತೊಂದು ಮೊಕದ್ದಮೆಯನ್ನು ಉಲ್ಲೇಖಿಸಿದ್ದು, ಅದರಲ್ಲಿ ಬದಲಿಯಾಗಿ ಸೇರಿಸದ ಮರಣ ಹೊಂದಿದ ಮೃತ ಪ್ರತಿವಾದಿಯ ವಾರಸುದಾರರು ಮತ್ತು ಅವರ ವಾರಸುದಾರರು ಪ್ರತ್ಯೇಕ ದಾವೆಯನ್ನು ತರಲು ಹಕ್ಕುಳ್ಳವರಾಗಿದ್ದರು ಹಾಗೂ ಅವರ ದಾವೆಯನ್ನು 244ನೇ ಪ್ರಕರಣದ ಉಪಬಂಧಗಳ ಮೂಲಕ ಪ್ರತಿಷೇಧಿಸಿಲ್ಲವೆಂದು (ಹೊಸ ಪ್ರಕರಣ 47) ನಿರ್ಣಯಿಸಲಾಗಿದೆ.

12. ಪ್ರಿವಿ ಕೌನ್ಸಿಲ್‌ನ ತೀರ್ಪನ್ನು ಸಹ ಉಲ್ಲೇಖಿಸಲಾಗಿದ್ದು, ಅದರಲ್ಲಿ ಈ ಮುಂದಿನಂತೆ ತೀರ್ಪು ನೀಡಲಾಗಿದೆ,– "ಪ್ರತಿವಾದಿಯ ಮರಣದ ನಂತರ ಪಡೆದುಕೊಂಡ ಪ್ರವರ್ತನೆಯಲ್ಲಿರುವ ಡಿಕ್ರಿಯ ಮೂಲಕ ಆತನ ಹೊಣೆಗಾರಿಕೆಯ ವ್ಯಾಪ್ತಿ ಮತ್ತು ಗುಣಮಟ್ಟವನ್ನು ಸಾಮಾನ್ಯ ನಿಬಂಧನೆಗಳಲ್ಲಿ ಈಗಾಗಲೇ ಘೋಷಿಸಿರುವುದನ್ನು ಮೊದಲ ಬಾರಿಗೆ ವಿಶ್ಲೇಷಿಸಲಾಗಿದ್ದು, ಯಾವ ದಾವೆಯಲ್ಲಿ ಆ ಡಿಕ್ರಿಯನ್ನು ಘೋಷಿಸಲಾಗಿದೆಯೋ ಆ ದಾವೆಗೆ ಮೃತನ ಪ್ರತಿನಿಧಿಗಳನ್ನು ಪಕ್ಷಕಾರರನ್ನಾಗಿ ಮಾಡಿದ ಹೊರತು, ಅವರಿಗೆ ಅದು ಬಂಧನಕಾರಿಯಾಗದು"

> "ದಾಖಲೆಯಲ್ಲಿನ ವ್ಯವಹರಣೆಗಳಿಗೆ ಪಕ್ಷಕಾರರಾಗಿರದಿದ್ದ ಅಥವಾ ಸೂಕ್ತ ರೀತಿಯಲ್ಲಿ ಪ್ರತಿನಿಧಿತರಾಗದಿದ್ದ ವ್ಯಕ್ತಿಗಳ ಸ್ವತ್ತನ್ನು ಮಾರಾಟ ಮಾಡಲು ನ್ಯಾಯಾಲಯವು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿಲ್ಲ. ಅಂಥ ವ್ಯಕ್ತಿಗಳ ವಿರುದ್ಧ ಮಾಡಬೇಕೆಂದು ತಾತ್ಪರ್ಯವಾಗುವ ಡಿಕ್ರಿಗಳಿಗೆ ಮತ್ತು ಮಾರಾಟಗಳಿಗೆ ಸಂಬಂಧಿಸಿದಂತೆ, ಅದು ಅಕೃತವಾಗುವುದು ಮತ್ತು ತಳ್ಳಿಹಾಕುವ ಯಾವುದೇ ವ್ಯವಹರಣೆಯಿಲ್ಲದೆ ಅವುಗಳನ್ನು ಉಪೇಕ್ಷಿಸಬಹುದಾಗಿದೆ."

13. ಮಾನ್ಯ ನ್ಯಾಯಮೂರ್ತಿಗಳು ಈ ಮೊಕದ್ದಮೆಯನ್ನು ಕುರಿತು ಸಹ ವ್ಯವಹರಿಸಿದ್ದು, ಅದರಲ್ಲಿ, ಡಿಕ್ರಿಯ ಜಾರಿಗೆ ಕಾನೂನುಬದ್ಧ ಪ್ರತಿನಿಧಿಗಳು

ಆಕ್ಷೇಪಣೆಯನ್ನು ಎತ್ತಬಹುದಾಗಿತ್ತು ಮತ್ತು ಆದ್ದರಿಂದ ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 244ನೇ ಪ್ರಕರಣದ ಅಡಿಯಲ್ಲಿ (ಹೊಸ ಪ್ರಕರಣ 47) ಆಕ್ಷೇಪಣೆಗಳನ್ನು ಎತ್ತಬಹುದಾಗಿತ್ತು ಹಾಗೂ ಪ್ರತ್ಯೇಕ ದಾವೆಯ ಮೂಲಕ ಅಲ್ಲವೆಂಬುದು ಉಚ್ಚ ನ್ಯಾಯಾಲಯದ ಅಭಿಪ್ರಾಯವಾಗಿತ್ತು.

14. ಮಾನ್ಯ ನ್ಯಾಯಮೂರ್ತಿಗಳು ***ಗೋಪಿ ನರೇನ್ ಖೌನಾ –ವಿರುದ್ಧ– ಬನ್ಸಿಧರ್***[9], ಮೊಕದ್ದಮೆಯಲ್ಲಿನ ಪ್ರಿವಿ ಕೌನ್ಸಿಲ್‌ನ ತೀರ್ಪನ್ನು ಸಹ ಉಲ್ಲೇಖಿಸಿದ್ದು, ಅದರಲ್ಲಿ ಪ್ರಿವಿ ಕೌನ್ಸಿಲ್‌ನ ಮಾನ್ಯ ನ್ಯಾಯಮೂರ್ತಿಗಳು, 244ನೇ ಪ್ರಕರಣವು, ಪಕ್ಷಕಾರರ ನಡುವಿನ ಆಕ್ಷೇಪಣೆಗಳು, ಡಿಕ್ರಿಯ ಜಾರಿಯಲ್ಲಿ ನ್ಯಾಯಾಲಯವು ನಿರ್ಧರಿಸಬಹುದಾಗಿತ್ತು ಎಂಬುದಕ್ಕೆ ಅನ್ವಯವಾಗದೆ, ಆ ಉದ್ದೇಶಕ್ಕಾಗಿ ಹೊಸ ಡಿಕ್ರಿಯ ಅಗತ್ಯವಿರುತ್ತಿತ್ತು ಎಂಬುದಕ್ಕೆ ಅನ್ವಯವಾಗುತ್ತದೆಂದು ನಿರ್ಣಯಿಸಿದ್ದಾರೆ.

15. ಮಾನ್ಯ ಹಂಗಾಮಿ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ಸುಲೈಮಾನ್ ಅವರು, ಪ್ರಿವಿ ಕೌನ್ಸಿಲ್‌ನ ಅಂಥ ಹಲವು ತೀರ್ಪುಗಳನ್ನು ಪ್ರಸ್ತಾಪಿಸಿ, ಡಿಕ್ರಿಯನ್ನು ಮೃತ ವ್ಯಕ್ತಿಯ ವಿರುದ್ಧ ಹೊರಡಿಸಬೇಕಿತ್ತೇ ಅಥವಾ ಆತನ ವಿರುದ್ಧ ಹೊರಡಿಸಲೇಬಾರದಾಗಿತ್ತೆ ಎಂಬುದು ಪ್ರಶ್ನೆಯಾಗಿದ್ದಲ್ಲಿ, ವಿವಾದವು ಡಿಕ್ರಿಯ ಜಾರಿಗೆ ಸಂಬಂಧಿಸಿರದೆ ಅದರ ನಾಶವನ್ನು ಗುರಿಯಾಗಿಸಿಕೊಂಡಿದ್ದರೆ, ಅದರಿಂದಾಗಿ ಅದು ಅಕೃತ, ನಿರ್ದುಷ್ಟ ಮತ್ತು ಸರಳವಾಗಿದೆ ಎಂದು ನಿರ್ಣಯಿಸಿದ್ದಾರೆ. ಡಿಕ್ರಿಯ ಜಾರಿಗೆ ಸಂಬಂಧಿಸಿದ ವಿವಾದವು ಸಿಂಧುವಾದ ಡಿಕ್ರಿಯ ಅಸ್ತಿತ್ವವನ್ನು ಕುರಿತು ಪರ್ಯಾಲೋಚಿಸುತ್ತದೆ. ಡಿಕ್ರಿಯು ಅಧಿಕಾರ ವ್ಯಾಪ್ತಿ ಹೊಂದಿರದಿದ್ದಲ್ಲಿ ಅಥವಾ ಅನ್ಯಥಾ ಕೇವಲ ಅಕೃತ ಮತ್ತು ಅಸಿಂಧುವಾಗಿದ್ದಲ್ಲಿ, ಅದರಿಂದಾಗಿ ಅದನ್ನು ಒಬ್ಬ ವ್ಯಕ್ತಿಯು ಉಪೇಕ್ಷಿಸಬಹುದಾಗಿದ್ದು, ಆತನ ವಿರೋಧವು ಕೇವಲ ಅದರ ಜಾರಿಯಾಗಿರದೆ, ಆತನು ಡಿಕ್ರಿಯನ್ನೇ ಆಕ್ಷೇಪಿಸಿರುತ್ತಾನೆ. ಅಂಥ ವಿವಾದವು 47ನೇ ಪ್ರಕರಣದ ವ್ಯಾಪ್ತಿಯೊಳಗೆ ಬರುವುದೇ ಇಲ್ಲ.

16. ಮಾನ್ಯ ನ್ಯಾಯಮೂರ್ತಿಗಳು ಈ ರೀತಿಯಾಗಿ ಅಭಿಪ್ರಾಯಪಟ್ಟಿದ್ದಾರೆ,- "ಯಾವ ವ್ಯಕ್ತಿಯ ವಿರುದ್ಧ ಡಿಕ್ರಿ ಅಸ್ತಿತ್ವದಲ್ಲಿರುವುದಿಲ್ಲವೋ ಆ ವ್ಯಕ್ತಿಗೆ ತನ್ನ ಸ್ವತ್ತನ್ನು ಜಫ್ತಿ ಮಾಡಲಾಗಿದೆ ಎಂದು ತಿಳಿದುಬಂದಾಗ, ಆತನು ನ್ಯಾಯಾಲಯಕ್ಕೆ ಹೋಗಲಾಗುವುದಿಲ್ಲ ಮತ್ತು ತನ್ನ ದೂರನ್ನು ಅದರ ಮುಂದೆ ಮಂಡಿಸಲಾಗುವುದಿಲ್ಲ ಅಥವಾ ಡಿಕ್ರಿಯು ಅಕೃತವಾಗಿದೆ ಎಂಬ ಸಂಗತಿಯ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದರೂ, ಅದಕ್ಕೆ ಅಧಿಕಾರವ್ಯಾಪ್ತಿ ಇರದೆ ಇದ್ದರೂ ಮುಂದಾಲೋಚನೆಯಿಲ್ಲದೆ ಅದು ಮುಂದುವರಿಯಬೇಕಾಗುತ್ತದೆ ಎಂಬುದನ್ನು ಅದು ಅನುಸರಿಸುವುದಿಲ್ಲ. ಖಂಡಿತವಾಗಿಯೂ ಡಿಕ್ರಿಯು ಅಕೃತವಾಗಿದ್ದಾಗ ಮತ್ತು ಅಧಿಕಾರವ್ಯಾಪ್ತಿ ಇಲ್ಲದೆ ಅದನ್ನು ಹೊರಡಿಸಿದಾಗ, ನ್ಯಾಯಾಲಯವು, ಈ ರೀತಿಯ ಡಿಕ್ರಿಯನ್ನು ಜಾರಿಗೊಳಿಸಲು ನಿರಾಕರಿಸುವ ಹಕ್ಕನ್ನು ಹೊಂದಿರುತ್ತದೆ. ಆದರೆ, ಬಾಧಿತ ಪಕ್ಷಕಾರನ ದೂರು, ಆತನು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯ ಅಥವಾ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ವ್ಯಾಜ್ಯಕ್ಕೆ ಅಪರಿಚಿತನಾಗಿರುವ ವ್ಯಕ್ತಿಯು ಸಲ್ಲಿಸಬಹುದಾಗಿರುವ ಸಿವಿಲ್ ಪ್ರಕ್ರಿಯಾ ಸಂಹಿತೆಯ 58ನೇ ನಿಯಮದ XXIನೇ ಕ್ರಮಾದೇಶದ ಅಡಿಯಲ್ಲಿನ ಆಕ್ಷೇಪಣೆಯ ಸ್ವರೂಪದಲ್ಲಿರುವ ಪ್ರತ್ಯೇಕ ದಾವೆಯನ್ನು ಪ್ರತಿಷೇಧಿಸುವ ಸಲುವಾಗಿ ಅದು ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಆಕ್ಷೇಪಣೆಯಾಗುವುದಿಲ್ಲ. ಅಂಥ ಸಂದರ್ಭಗಳಲ್ಲಿ, ಬಾಧಿತ ವ್ಯಕ್ತಿಯ ಪರವಾಗಿ ಅಥವಾ ವಿರುದ್ಧವಾಗಿ ಹೊರಡಿಸಿದ ಅದೇಶವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಡಿಕ್ರಿಯಾಗುವುದಿಲ್ಲವೆಂಬ ಕಾರಣದಿಂದ ಹೆಚ್ಚಿನ ಅಪೀಲುಗಳಿಗೆ ಆಸ್ಪದವಿರುವುದಿಲ್ಲ.

17. ಇದೇ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಸಹ, 47ನೇ ಪ್ರಕರಣವು ವಾದಿಯ ದಾವೆಯ ದಾರಿಗೆ ಅಡೆತಡೆಯಾಗುವುದಿಲ್ಲವೆಂಬ ಮಾನ್ಯ ಹಂಗಾಮಿ ಮುಖ್ಯ ನ್ಯಾಯಾಧೀಶರ ನಿರ್ಣಯದೊಂದಿಗೆ ಸಹಮತಿ ಹೊಂದಿದ್ದಾರೆ.

18. ಪೂರ್ಣ ಪೀಠದ ಮೂರನೇ ನ್ಯಾಯಾಧೀಶರಾಗಿರುವ ನ್ಯಾಯಮೂರ್ತಿ ಬ್ಯಾನರ್ಜಿಯವರು ಸಹ, ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತಿವಾದಿಗಳ ಸ್ವತ್ತು

ಮಾರಾಟಕ್ಕೆ ಒಳಗಾಗಿದೆ ಎಂದು ಘೋಷಿಸಿದ ಡಿಕ್ರಿಯು ಅಕೃತವೇ ಅಥವಾ ಅಲ್ಲವೇ ಎಂಬುದು ಪ್ರಶ್ನೆಯಾಗಿದೆ ಎಂಬ ಈ ಅಭಿಪ್ರಾಯದೊಂದಿಗೆ ಸಹಮತಿ ಹೊಂದಿದ್ದಾರೆ. ಇದು ಡಿಕ್ರಿಯ ಜಾರಿಗೆ ಅಥವಾ ತೀರಿಕೆಗೆ ಸಂಬಂಧಿಸಿದ ಪ್ರಶ್ನೆಯಾಗಿರುವುದಿಲ್ಲ. ಈ ಪ್ರಶ್ನೆಯು ಡಿಕ್ರಿಯ ಮೂಲಕ್ಕೆ ಸಂಬಂಧಿಸಿದ್ದಾಗಿದ್ದು, ಇದು ಜಾರಿ ನ್ಯಾಯಾಲಯವು ನಿರ್ಧರಿಸಲಾಗದ ವಿಷಯವಾಗಿದೆ.

19. ವಾದಿಗಳ ತಾಯಿಯ ಮರಣದ ನಂತರ, ಆಕೆಯ ವಿರುದ್ಧ ಹೊರಡಿಸಲಾಗಿದ್ದ ಅಂತಿಮ ಅಡಮಾನ ಡಿಕ್ರಿಯು ಅಕೃತವೆಂದು ಘೋಷಿಸಿ, ಡಿಕ್ರಿಯನ್ನು ಹಾಗೂ ಅದರ ಮೇರೆಗಿನ ಮಾರಾಟವನ್ನು ರದ್ದುಗೊಳಿಬೇಕೆಂಬ ಘೋಷಣೆಗಾಗಿ ಸಲ್ಲಿಸಿದ್ದ ದಾವೆಯಾದ ***ಅಬ್ದುಲ್ ರಹೀಮ್ –ವಿರುದ್ಧ– ಎಝಿಕೀಲ್***[10] ಮೊಕದ್ದಮೆಯಲ್ಲಿ, ಮಾನ್ಯ ನ್ಯಾಯಮೂರ್ತಿಗಳು ***ಜಂಗ್ಲಿ ಲಾಲ್ –ವಿರುದ್ಧ– ಲಡ್ಡು ರಾಮ್ ಮಾರವಾರಿ***[11] ಮೊಕದ್ದಮೆಯಲ್ಲಿ, ಪಾಟ್ನಾ ಉಚ್ಚ ನ್ಯಾಯಾಲಯದ ಮತ್ತೊಂದು ಪೂರ್ಣ ಪೀಠದ ತೀರ್ಪನ್ನು ಅವಲಂಬಿಸಿದ್ದಾರೆ. ಆ ಮೊಕದ್ದಮೆಯಲ್ಲಿ, ***ಕಾಲಿಪದಾ ಸರ್ಕಾರ್ –ವಿರುದ್ಧ– ಹರಿ ಮೋಹನ್ ದಲಾಲ್***[12], ಮೊಕದ್ದಮೆಯಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯವು ಪ್ರಾಥಮಿಕ ಡಿಕ್ರಿಯ ನಂತರ ಅಡಮಾನದಾರ ಪ್ರತಿವಾದಿಯು ಮರಣ ಹೊಂದಿದ್ದು, ಜಾರಿ ನ್ಯಾಯಾಲಯವು ವಿಷಯದ ಈ ಅಂಶವನ್ನು ಪರಿಗಣಿಸಲಾಗುವುದಿಲ್ಲವಾದರೂ, ಡಿಕ್ರಿಯನ್ನು ಅದು ಇರುವಂತೆಯೇ ಜಾರಿಗೊಳಿಸಲು ಬದ್ಧವಾಗಿದೆ ಎಂದು ನಿರ್ಣಯಿಸಿದ್ದರಿಂದ, ಅದನ್ನು ಅವಲಂಬಿಸಬೇಕೆಂದು ಕೋರಲಾಗಿತ್ತು.

20. ***ಜಂಗ್ಲಿ ಲಾಲ್*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಪೂರ್ಣ ಪೀಠವು, ಅಂಥ ವಾದವನ್ನು ಒಪ್ಪಲು ನಿರಾಕರಿಸಿ, ಅಸಿಂಧುಗೊಳಿಸಬಹುದಾದಂಥ ಡಿಕ್ರಿಗಳ, ಎಂದರೆ ರದ್ದುಗೊಳಿಸುವವರೆಗೆ ಸಿಂಧುವಾದ ಡಿಕ್ರಿಗಳ ಮತ್ತು ಪ್ರಾರಂಭದಿಂದಲೇ ಅಸಿಂಧುವಾದ ಡಿಕ್ರಿಗಳ ನಡುವಿನ ವ್ಯತ್ಯಾಸಕ್ಕೆ ಒತ್ತು ನೀಡಿತು. ವಿವಾದದಲ್ಲಿರುವ

10. ಐಎಲ್‌ಆರ್ 1935 ಕಲ್ಕತ್ತ 472 11. (1919) 4 ಪಾಟ್ನಾ ಎಲ್.ಜೆ. 240
12. (1916) ಐಎಲ್‌ಆರ್ 44 ಸಿಎಲ್ 627

ನೈಜ ಪ್ರಶ್ನೆ ಡಿಕ್ರಿಯ ಸಿಂಧುತ್ವವೇ ಹೊರತು ಡಿಕ್ರಿಯ ತೀರಿಕೆಯಲ್ಲವಾದ್ದರಿಂದ, ಆ ಕುರಿತು ಸ್ವತಂತ್ರ ದಾವೆಯಲ್ಲಿ ಆಕ್ಷೇಪಣೆ ಎತ್ತಬಹುದಾಗಿದ್ದು, ವಾದಿಗಳ ಹಿತಾಸಕ್ತಿಯನ್ನು, ಜಾರಿ ವ್ಯವಹರಣೆಗಳಲ್ಲಿ ತಾಂತ್ರಿಕವಾಗಿ ಆಡಳಿತಗಾರನ ಮೂಲಕ ಪ್ರತಿನಿಧಿಸುವಂತಿಲ್ಲವೆಂದು ಮಾನ್ಯ ನ್ಯಾಯಮೂರ್ತಿಗಳು ನಿರ್ಣಯಿಸಿದ್ದಾರೆ.

21. ***ಎ. ವೆಂಕಟಶೇಷಯ್ಯ ಮತ್ತು ಇತರರು –ವಿರುದ್ಧ– ಎ. ವೀರಯ್ಯ ಮತ್ತು ಇತರರು***[13] ಮೊಕದ್ದಮೆಯಲ್ಲಿ, ಇನ್ನೊಂದು ಪೂರ್ಣ ಪೀಠದ ನಿರ್ಣಯದಲ್ಲಿ, "ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣವು ದಾವೆಯ ನಿರ್ವಹಣೆಗೆ ಪ್ರತಿಷೇಧವೇ? ಎಂಬ ಪ್ರಶ್ನೆ ಕುರಿತು ನಿರ್ಧರಿಸಲಾಗಿದೆ.

22. ನಿರ್ಣಯ ಕೈಗೊಳ್ಳುವ ಅವಧಿಯಲ್ಲಿ, ಜಾರಿ ನ್ಯಾಯಾಲಯವು ಡಿಕ್ರಿಯ ಕಾರಣಗಳನ್ನು ಪುನರ್‌ವಿಮರ್ಶಿಸಿ ಪರಭಾರೆ ಮಾಡುವುದು ಅಸಿಂಧುವೆಂದು ನಿರ್ಣಯಿಸುವುದಾದರೆ, ಆ ದಾವೆಯಲ್ಲಿನ ನಿರ್ಣಯವು, ಇನ್ನೊಂದು ದಾವೆಯಲ್ಲಿ ಪೂರ್ವ ನ್ಯಾಯ ನಿರ್ಣಯವಾಗುವುದು ಎಂದು ತೀರ್ಪು ನೀಡುವುದು ಅಸಮಂಜಸವಾಗುವುದು ಎಂಬುದರ ಕಡೆಗೆ ಗಮನ ಸೆಳೆಯಲಾಯಿತು. ಜಾರಿ ನ್ಯಾಯಾಲಯವು ಡಿಕ್ರಿಯ ಕಾರಣಗಳನ್ನು ಪುನರ್‌ವಿಮರ್ಶಿಸುವುದರ ಬದಲಾಗಿ ಸಾರ್ವಜನಿಕ ನೀತಿಯ ತತ್ವಗಳನ್ನು ಸಮರ್ಥಿಸಲು ಒತ್ತಡದ ಅಂಶಕ್ಕೆ ನಿಯಮವನ್ನು ಅನ್ವಯಿಸುವುದನ್ನು ಪ್ರತಿಷೇಧಿಸುವ ಕಡ್ಡಾಯ ನಿಯಮಕ್ಕೆ ಅನುಗುಣವಾಗಿರುವುದನ್ನು ಪೂರ್ಣ ಪೀಠವು ಆಯ್ಕೆ ಮಾಡಿಕೊಂಡಿತು.

23. ಇಂಥಹುವೇ ಸಂದರ್ಭಗಳಲ್ಲಿ, "ಆದುದರಿಂದ, ಎತ್ತಲಾದ ಪ್ರಶ್ನೆಯು ಡಿಕ್ರಿಯ ಜಾರಿಗೆ ಸಂಬಂಧಿಸಿರದೆ, ಡಿಕ್ರಿಯ ಸಿಂಧುತ್ವಕ್ಕೆ ಸಂಬಂಧಿಸಿದುದಾಗಿದೆ" ಎಂದು ಪೂರ್ಣ ಪೀಠವು ನಿರ್ಣಯಿಸಿತು. 47ನೇ ಪ್ರಕರಣದ ಮೇರೆಗೆ, ಡಿಕ್ರಿಯನ್ನು ಹೊರಡಿಸಲಾದ ದಾವೆಗೆ ಸಂಬಂಧಿಸಿದ ಪಕ್ಷಕಾರರ ಅಥವಾ ಅವರ ಪ್ರತಿನಿಧಿಗಳ

13. ಎಐಆರ್ 1958 ಎಪಿ (1) ಅಥವಾ 1957 ಎಸ್‌ಸಿಸಿ ಆನ್‌ಲೈನ್ ಎಪಿ 225

ನಡುವೆ ಉದ್ಭವಿಸಿದ ಮತ್ತು ಡಿಕ್ರಿ ಜಾರಿ, ವಿಲೆ ಅಥವಾ ತೀರಿಕೆಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳನ್ನು, ನ್ಯಾಯಾಲಯವು ಡಿಕ್ರಿಯನ್ನು ಜಾರಿಗೊಳಿಸುವ ಮೂಲಕ ನಿರ್ಧರಿಸತಕ್ಕದ್ದೆ ಹೊರತು ಪ್ರತ್ಯೇಕ ದಾವೆಯ ಮೂಲಕವಲ್ಲ ಎಂದು ನಿರ್ಣಯಿಸಿತು. ಈ ಪ್ರಕರಣವನ್ನು ಅನ್ವಯಿಸಲು, ಎತ್ತಲಾದ ಪ್ರಶ್ನೆಯು, ಡಿಕ್ರಿಯ ಜಾರಿ, ವಿಲೆ ಅಥವಾ ತೀರಿಕೆಗೆ ಸಂಬಂಧಿಸಿರಬೇಕು. ಆ ಮೊಕದ್ದಮೆಯಲ್ಲಿ ವಾದಿಗಳು ಎತ್ತಿದ ಪ್ರಶ್ನೆಯು, ಡಿಕ್ರಿಯು ಅಸಿಂಧುವಾಗಿತ್ತೆಂಬ ಕಾರಣದ ಮೇಲೆ ಅವರು ಡಿಕ್ರಿಯನ್ನೇ ವಿರೋಧಿಸುವುದಕ್ಕಾಗಿ ಅದರ ಜಾರಿಗೆ ಸಂಬಂಧಿಸಿರುವುದಿಲ್ಲ ಎಂದು ನಿರ್ಣಯಿಸಿದ್ದರು. ಪುನಃ ***ಮಹಾಬೀರ್ ಸಿಂಗ್ –ವಿರುದ್ಧ– ದೀಪ್ ನರೇನ್ ತಿವಾರಿ*** (ಮೇಲಿನ) ಮೊಕದ್ದಮೆಯನ್ನವಲಂಬಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣವು, ಪ್ರತ್ಯೇಕ ದಾವೆಯನ್ನು ಹೂಡಲು ಮೃತ ಪ್ರತಿವಾದಿಯ ಕಾನೂನುಬದ್ಧ ಪ್ರತಿನಿಧಿಗಳಿಗೆ ಪ್ರತಿಷೇಧವಲ್ಲ ಎಂದು ಮಾನ್ಯ ನ್ಯಾಯಮೂರ್ತಿಗಳು ನಿರ್ಣಯಿಸಿದ್ದಾರೆ.

24. ***ಧುರಂಧರ್ ಪ್ರಸಾದ್ ಸಿಂಗ್ –ವಿರುದ್ಧ– ಜೈ ಪ್ರಕಾಶ್ ವಿಶ್ವವಿದ್ಯಾನಿಲಯ ಮತ್ತು ಇತರರು***[14] ಈ ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಇಂಥಹುದೇ ಸನ್ನಿವೇಶವನ್ನು ಕುರಿತು ವ್ಯವಹರಿಸುತ್ತಿದ್ದಾಗ, ಈ ಮೊಕದ್ದಮೆಯು ಸಿವಿಲ್ ಪ್ರಕ್ರಿಯಾ ಸಂಹಿತೆಯ XXIIನೇ ಕ್ರಮಾದೇಶದ 3ನೇ ಅಥವಾ 4ನೇ ನಿಯಮಗಳ ಅಡಿಯಲ್ಲಿ ಉದ್ಭವಿಸದೆ, XXIIನೇ ಕ್ರಮಾದೇಶದ 10ನೇ ನಿಯಮದ ಅಡಿಯಲ್ಲಿ ಉದ್ಭವಿಸಿದೆ ಎಂದು ನಿರ್ಣಯಿಸಿತ್ತು.

25. XXIIನೇ ಕ್ರಮಾದೇಶದ 3ನೇ, 4ನೇ ಮತ್ತು 10ನೇ ನಿಯಮಗಳ ಉಪಬಂಧಗಳ ನಡುವಿರುವ ವ್ಯತ್ಯಾಸವನ್ನು ತಿಳಿಸುವ ಪ್ರಯತ್ನದಲ್ಲಿ ಮಾನ್ಯ ನ್ಯಾಯಮೂರ್ತಿಗಳು, 3ನೇ, 4ನೇ ಮತ್ತು 10ನೇ ನಿಯಮಗಳನ್ನು ಅಧಿನಿಯಮಿತಿಗೊಳಿಸುವಾಗ ಸಂಸತ್ತು ಅತ್ಯಂತ ಸ್ಪಷ್ಟವಾದ ವ್ಯತ್ಯಾಸವನ್ನು ಮಾಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. 3ನೇ ಮತ್ತು 4ನೇ ನಿಯಮಗಳ ಅಡಿಯಲ್ಲಿ

14. (2001) 6 ಎಸ್‌ಸಿಸಿ 534

ಬರುವ ಮೊಕದ್ದಮೆಗಳಲ್ಲಿ, ದಾವೆಯ ಹಕ್ಕು ಅಸ್ತಿತ್ವದಲ್ಲಿದ್ದರೆ, ಮೃತ ಪಕ್ಷಕಾರನ ಕಾನೂನುಬದ್ಧ ಪ್ರತಿನಿಧಿಗಳನ್ನು ತರುವ ಯಾವುದೇ ಅರ್ಜಿಯನ್ನು ನಿಗದಿಪಡಿಸಲಾದ ಸಮಯದೊಳಗೆ ಸಲ್ಲಿಸಲಾಗಿಲ್ಲದಿದ್ದರೆ, ದಾವೆಯು ಸ್ವಯಂ ಆಗಿ ಕೊನೆಗೊಳ್ಳುತ್ತದೆ ಹಾಗೂ 9ನೇ ನಿಯಮದಲ್ಲಿ ಹೇಳಲಾದ ಮೂಲ ಪ್ರಮೇಯದ ಕಾರಣಗಳ ಮೇರೆಗೆ ಸದರಿ ನಿಯಮದ ಅಡಿಯಲ್ಲಿ ದಾವೆಯ ಕೊನೆಗೊಳಿಸುವಿಕೆಯನ್ನು ರದ್ದುಗೊಳಿಸಲು ಕಾರ್ಯವಿಧಾನವನ್ನು ನಿಯಮಿಸಲಾಗಿದೆ. ಇನ್ನೊಂದೆಡೆ, 10ನೇ ನಿಯಮದ ಅಡಿಯಲ್ಲಿ, ದಾವೆಯು ಇತ್ಯರ್ಥದಲ್ಲಿರುವಾಗ ಹಿತಾಸಕ್ತಿಯು ಯಾವ ವ್ಯಕ್ತಿಯ ಮೇಲೆ ಪ್ರಾಪ್ತವಾಗುತ್ತದೋ ಆ ವ್ಯಕ್ತಿಯು ಅಥವಾ ಆತನ ವಿರುದ್ಧ ವ್ಯವಹರಣೆಯನ್ನು ಮುಂದುವರಿಸಲು ನ್ಯಾಯಾಲಯದ ಅನುಮತಿಗಾಗಿ ಅರ್ಜಿ ಸಲ್ಲಿಸಲು ವಿಫಲವಾದ ಸಂದರ್ಭದಲ್ಲಿ, ಸಂಸತ್ತು ಅಂಥ ಯಾವುದೇ ಕಾರ್ಯವಿಧಾನವನ್ನು ನಿಯಮಿಸಿರುವುದಿಲ್ಲ ಎಂದು ಅಭಿಪ್ರಾಯಪಡಲಾಗಿದ್ದು, ಇದು, ಸಂಸತ್ತು, ಈ ಸಂದರ್ಭದ ಅರಿವುಳ್ಳದ್ದಾಗಿಯೂ, ಯಾವ ವ್ಯಕ್ತಿಯ ಮೇಲೆ ಹಿತಾಸಕ್ತಿಯು ಪ್ರಾಪ್ತವಾಗುವುದೋ ಆತನನ್ನು ದಾಖಲೆಗೆ ತರಲು, ಆತನು ಅಥವಾ ಆತನ ವಿರುದ್ಧ ದಾವೆಯನ್ನು ಮುಂದುವರಿಸಲು ಅನುಮತಿಗಾಗಿ ಅರ್ಜಿ ಸಲ್ಲಿಸಲು ವಿಫಲವಾದ ಸಂದರ್ಭದಲ್ಲಿ, ಮೂಲ ಪಕ್ಷಕಾರನ ವಿವಾದದ ವಿಷಯದಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದುವುದು ಕೊನೆಗೊಂಡಾಗ್ಯೂ, ಆತನು ಅಥವಾ ಆತನ ವಿರುದ್ಧದ ವ್ಯವಹರಣೆ ಮುಂದುವರೆಯಬೇಕೆಂಬುದು ಶಾಸಕಾಂಗದ ಉದ್ದೇಶವಾಗಿದ್ದರಿಂದ, ದಾವೆಯು ವಜಾಗೊಳ್ಳುವಿಕೆಯಿಂದ ವಿಫಲತೆಯು ಸಂಭವಿಸುತ್ತದೆಂದು ಸಂಸತ್ತು ನಿಯಮಿಸಿರುವುದಿಲ್ಲ ಎಂಬುದನ್ನು ತೋರಿಸುತ್ತದೆ.

26. ಮಾನ್ಯ ನ್ಯಾಯಮೂರ್ತಿಗಳು, ***ಕಿರಣ್ ಸಿಂಗ್ –ವಿರುದ್ಧ– ಚಮನ್ ಪಾಸ್ವಾನ್***[15] ಮೊಕದ್ದಮೆಯನ್ನು ಉಲ್ಲೇಖಿಸಿದ್ದು, ಅದರಲ್ಲಿ, ನ್ಯಾಯಾಲಯವು ಹೊರಡಿಸಿದ ಡಿಕ್ರಿಯು ಅಕೃತವೇ ಮತ್ತು ಅಂಥ ಡಿಕ್ರಿಯ ಜಾರಿಯನ್ನು ಜಾರಿ ಹಂತದಲ್ಲಿ ಪ್ರತಿಷೇಧಿಸಬಹುದೇ ಎಂಬ ಪ್ರಶ್ನೆಗಳನ್ನು ಎತ್ತಲಾಗಿದ್ದು, ಅದು ನಿಸ್ಸಂಶಯವಾಗಿ, ಸಂಹಿತೆಯ 47ನೇ ಪ್ರಕರಣದ ಅಡಿಯಲ್ಲಿ ಆಕ್ಷೇಪಣೆಯನ್ನು ಕೈಗೆತ್ತಿಕೊಳ್ಳುವ ಅರ್ಥದಲ್ಲಿದೆ.

27. ನ್ಯಾಯಮೂರ್ತಿ ವೆಂಕಟರಾಮ ಅಯ್ಯರ್ ಅವರು ಸ್ವತಃ ತಮ್ಮ ಹಾಗೂ ನ್ಯಾಯಮೂರ್ತಿಗಳಾದ ಬಿ.ಕೆ. ಮುಖರ್ಜಿ, ವಿವಿಯನ್ ಬೋಸ್, ಗುಲಾಮ್ ಹಸನ್ ಇವರ ಪರವಾಗಿ ಮಾತನಾಡಿ, "ಅಧಿಕಾರವ್ಯಾಪ್ತಿ ಇಲ್ಲದೆ ನ್ಯಾಯಾಲಯವು ಹೊರಡಿಸಿದ ಡಿಕ್ರಿಯು, ಅಕೃತವಾದುದಾಗಿದೆ ಹಾಗೂ ಜಾರಿ ಹಂತದಲ್ಲಿ ಮತ್ತು ಪಾರ್ಶ್ವಿಕ ವ್ಯವಹರಣೆಗಳಲ್ಲಿಯೂ ಸಹ, ಯಾವಾಗ ಮತ್ತು ಎಲ್ಲೆಲ್ಲಿ ಅದನ್ನು ಜಾರಿಗೊಳಿಸಬೇಕೆಂದು ಅಥವಾ ಅವಲಂಬಿಸಬೇಕೆಂದು ಕೋರಲಾಗುವುದೋ ಆವಾಗ ಮತ್ತು ಅಲ್ಲೆಲ್ಲಾ ಅದರ ಅಸಿಂಧುತ್ವವನ್ನು ಕುರಿತು ವಾದಿಸಬಹುದು" ಎಂದು ನಿರ್ಣಯಿಸಿರುವುದನ್ನು ಮಾನ್ಯ ನ್ಯಾಯಮೂರ್ತಿಗಳು ಅವಲಂಬಿಸಿದ್ದಾರೆ. ***ವಾಸುದೇವ್ ಧಂಜಿಭಾಯ ಮೋದಿ -ವಿರುದ್ಧ- ರಾಜಾಭಾಯ ಅಬ್ದುಲ್ ರೆಹಮಾನ್***[16] ಮೊಕದ್ದಮೆಯಲ್ಲಿ ಉಲ್ಲೇಖಿಸಿದ ತೀರ್ಪನ್ನು ಉದ್ಧರಿಸುವುದು ಪ್ರಯೋಜನಕಾರಿಯಾಗುವುದು. ಈ ಮೊಕದ್ದಮೆಯ 6ನೇ ಮತ್ತು 7ನೇ ಕಂಡಿಕೆಗಳಲ್ಲಿ ಈ ಮುಂದಿನಂತೆ ನಿರ್ಣಯಿಸಲಾಗಿದೆ:

> "6. ಡಿಕ್ರಿಯನ್ನು ಜಾರಿಗೊಳಿಸುವ ನ್ಯಾಯಾಲಯವು, ಡಿಕ್ರಿಯ ಉದ್ದೇಶವನ್ನರಸಲಾಗುವುದಿಲ್ಲ: ಪಕ್ಷಕಾರರ ಅಥವಾ ಅವರ ಪ್ರತಿನಿಧಿಗಳ ನಡುವೆ ಅದರ ತಾತ್ಪರ್ಯಕ್ಕನುಗುಣವಾಗಿ ಡಿಕ್ರಿಯನ್ನು ತೆಗೆದುಕೊಳ್ಳಬೇಕು ಹಾಗೂ ಕಾನೂನಿನಲ್ಲಿ ಮತ್ತು ಸಂಗತಿಗಳ ಆಧಾರದ ಮೇಲೆ ಡಿಕ್ರಿಯು ತಪ್ಪಾಗಿದೆ ಎಂಬ ಯಾವುದೇ ಆಕ್ಷೇಪಣೆಯನ್ನು ಪುರಸ್ಕರಿಸಲಾಗುವುದಿಲ್ಲ. ಅಪೀಲಿನಲ್ಲಿ ಅಥವಾ ಪುನರೀಕ್ಷಣ ಅರ್ಜಿಯಲ್ಲಿ ಸೂಕ್ತ ವ್ಯವಹರಣೆಗಳ ಮೂಲಕ ರದ್ದುಗೊಳಿಸುವವರೆಗೆ, ಡಿಕ್ರಿಯು ತಪ್ಪಾಗಿದ್ದರೂ ಸಹ ಅದು ಪಕ್ಷಕಾರರ ನಡುವೆ ಆಗಲೂ ಬಂಧನಕಾರಿಯಾಗಿರುತ್ತದೆ.
>
> 7. ಡಿಕ್ರಿಯು ಅಕೃತವಾಗಿದ್ದಾಗ, ಉದಾಹರಣೆಗೆ, ಡಿಕ್ರಿಯ ದಿನಾಂಕದಂದು ಮೃತನಾಗಿದ್ದ ವ್ಯಕ್ತಿಯು ಕಾನೂನುಬದ್ಧ ಪ್ರತಿನಿಧಿಗಳನ್ನು ದಾಖಲೆಗೆ ತರದೆ ಅಥವಾ ಪ್ರಮಾಣಪತ್ರವಿಲ್ಲದೆ

ತೀರ್ಪಿನ ಪ್ರಾಮುಖ್ಯತೆಗೆ ವಿರುದ್ಧವಾಗಿ ಡಿಕ್ರಿಯನ್ನು ಹೊರಡಿಸಿದಲ್ಲಿ, ಜಾರಿಗೆ ಸಂಬಂಧಿಸಿದ ವ್ಯವಹರಣೆಯಲ್ಲಿ ಆ ಬಗ್ಗೆ ಎತ್ತಬಹುದಾದಂಥ ಆಕ್ಷೇಪಣೆಯು (ಹೀಗೆ 'ಒಂದು') ಆಧಾರದ ಮೇಲೆ ಜಾರಿಗೊಳಿಸಬೇಕೆಂದು ಕೋರಲಾಗುತ್ತದೆ. ಪುನಃ, ಡಿಕ್ರಿಯನ್ನು ಹೊರಡಿಸಲು ಅಂತರ್ನಿಹಿತ ಅಧಿಕಾರವ್ಯಾಪ್ತಿ ಇಲ್ಲದಿರುವ ನ್ಯಾಯಾಲಯವು ಅದನ್ನು ಹೊರಡಿಸಿದಾಗ, ದಾಖಲೆಯಲ್ಲಿ ಆಕ್ಷೇಪಣೆ ಕಂಡುಬಂದರೆ, ಅದರ ಸಿಂಧುತ್ವಕ್ಕೆ ಸಂಬಂಧಿಸಿದ ಆಕ್ಷೇಪಣೆಯನ್ನು ಜಾರಿ ವ್ಯವಹರಣೆಯಲ್ಲಿ ಎತ್ತಬಹುದು: ಡಿಕ್ರಿಯನ್ನು ಹೊರಡಿಸಲು ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದು, ಅದು ದಾಖಲೆಯಲ್ಲಿ ಕಂಡುಬಂದಿಲ್ಲದಿದ್ದಲ್ಲಿ ಮತ್ತು ಎತ್ತಲಾದ ಆಕ್ಷೇಪಣೆಗಳನ್ನು ಪರೀಕ್ಷಿಸಬೇಕಾಗಿದ್ದಲ್ಲಿ ಹಾಗೂ ವಿಚಾರಣಾ ಅವಧಿಯಲ್ಲಿ ಅಥವಾ ಆಕ್ಷೇಪಣೆಯನ್ನು ಎತ್ತಬೇಕಾಗಿದ್ದಲ್ಲಿ ಅಥವಾ ಆಕ್ಷೇಪಣೆಯನ್ನು ಎತ್ತಬಹುದಾಗಿತ್ತು, ಆದರೆ ಎತ್ತಿಲ್ಲವೆಂದಾದಲ್ಲಿ, ಆಗ ಅಧಿಕಾರವ್ಯಾಪ್ತಿ ಇಲ್ಲದಿರುವ ಆಧಾರದ ಮೇಲೆ ಸಹ ಡಿಕ್ರಿಯ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಯನ್ನು ಪುರಸ್ಕರಿಸಲು ಜಾರಿ ನ್ಯಾಯಾಲಯವು ಅಧಿಕಾರವ್ಯಾಪ್ತಿ ಹೊಂದಿರಲಿಲ್ಲವೆಂದು ನಿರ್ಧರಿಸಬೇಕಾದ ಅಗತ್ಯವಿರುತ್ತದೆ."

28. ಮಾನ್ಯ ನ್ಯಾಯಮೂರ್ತಿಗಳು ***ಆರ್. –ವಿರುದ್ಧ– ಪದ್ದಿಂಗ್ಟನ್ ವ್ಯಾಲ್ಯೂಯೇಷನ್ ಆಫೀಸರ್, ಇಎಕ್ಸ್. ಪಿ. ಪೀಶೆ ಪ್ರಾಪರ್ಟಿ ಕಾರ್ಪೋರೇಷನ್ ಲಿಮಿಟೆಡ್***[17], ಮೊಕದ್ದಮೆಯಲ್ಲಿ, ಮಾನ್ಯ ನ್ಯಾಯಾಧೀಶರಾಗಿದ್ದ ಡೆನ್ನಿಂಗ್ ಎಮ್.ಆರ್. ಅವರ ಅಭಿಪ್ರಾಯಗಳನ್ನು ಸಹ ಉಲ್ಲೇಖಿಸಿದ್ದು, ಅದರಲ್ಲಿ ಮಾನ್ಯ ನ್ಯಾಯಾಧೀಶರುಗಳು, "ಎರಡು ಬಗೆಯ ಅಸಿಂಧುತ್ವಗಳನ್ನು ಪ್ರತ್ಯೇಕವಾಗಿ ನೋಡುವುದು ಅವಶ್ಯವಾಗಿದೆ. ಒಂದು ಬಗೆಯ ಅಸಿಂಧುತ್ವವು ಎಷ್ಟು ಗಂಭೀರವಾದುದೆಂದರೆ

17. (1965) 2 ಎಎಲ್ಎಲ್ ಇಆರ್ 836

ಅದು ಸಂಪೂರ್ಣವಾಗಿ ಅಕೃತವಾಗಿರುತ್ತದೆ. ಇಂಥ ಮೊಕದ್ದಮೆಗಳಲ್ಲಿ, ಅದನ್ನು ರದ್ದುಗೊಳಿಸುವ ಆದೇಶವನ್ನು ಹೊರಡಿಸುವ ಅಗತ್ಯವೇ ಇರುವುದಿಲ್ಲ. ಅದು ತತ್‌ಕ್ಷಣವೇ ಸ್ವಯಂ ಆಗಿ ಅಕೃತ ಮತ್ತು ಶೂನ್ಯವಾಗುತ್ತದೆ. ಇನ್ನೊಂದು ಬಗೆಯದ್ದೆಂದರೆ, ಆ ಅಸಿಂಧುತ್ವವನ್ನು ಸಂಪೂರ್ಣವಾಗಿ ಅಸಿಂಧುವೆಂದು ಹೇಳಲಾಗುವುದಿಲ್ಲವಾದರೂ, ಅದು ಶೂನ್ಯಗೊಳಿಸಬಹುದಾದುದಾಗಿರುತ್ತದೆ......" ಎಂದು ನಿರ್ಣಯಿಸಿದ್ದಾರೆ.

29. ಶೂನ್ಯಗೊಳಿಸಿದ ಮತ್ತು ಶೂನ್ಯಗೊಳಿಸಬಹುದಾದ ಡಿಕ್ರಿಗಳ ಮತ್ತು ಆದೇಶಗಳ ಬಗ್ಗೆ ಚರ್ಚಿಸಿದ ನಂತರ, ಮಾನ್ಯ ನ್ಯಾಯಮೂರ್ತಿಗಳು, ಸಂಹಿತೆಯ 47ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಬಹುದಾದ ಅಧಿಕಾರವು ಸೂಕ್ಷ್ಮವಾದುದಾಗಿದೆ ಮತ್ತು ಅತ್ಯಂತ ಪರಿಮಿತ ಪರಿಶೀಲನಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ನಿರ್ಧರಿಸಿದ್ದಾರೆ. ಆದ್ದರಿಂದ, ಡಿಕ್ರಿಯು ಪ್ರಾರಂಭದಿಂದಲೇ ಶೂನ್ಯ ಮತ್ತು ಅಕೃತವೆಂದು ಕಂಡುಬಂದರೆ, ಅದರ ಜಾರಿಗೆ ಸಂಬಂಧಿಸಿದಂತೆ ಸಂಹಿತೆಯ 47ನೇ ಪ್ರಕರಣದ ಅಡಿಯಲ್ಲಿ ಜಾರಿ ನ್ಯಾಯಾಲಯವು ಆಕ್ಷೇಪಣೆಗಳಿಗೆ ಅವಕಾಶ ನೀಡಬಹುದೆಂಬುದು ಅತ್ಯಂತ ಸ್ಪಷ್ಟ.

30. ಮೂಲ ಪ್ರತಿವಾದಿಯು, ವಿವಾದದ ವಿಷಯದಲ್ಲಿ ತನಗೆ ಇನ್ನು ಯಾವುದೇ ಆಸಕ್ತಿ ಇಲ್ಲವೆಂದು ಅಥವಾ ಉದ್ದೇಶಪೂರ್ವಕವಾಗಿ ವ್ಯವಹರಣೆಯಲ್ಲಿ ಆಸಕ್ತಿಯನ್ನು ವಹಿಸಿಲ್ಲವೆಂದು ಅಥವಾ ಪ್ರತಿಕಕ್ಷಿಯೊಂದಿಗೆ ಶಾಮೀಲಾಗಿಲ್ಲವೆಂದು ಅಥವಾ ಕಾನೂನು ಅನುಮತಿಸಬಹುದಾದ ಯಾವುದೇ ಇತರ ಆಧಾರದ ಮೇರೆಗೆ ನ್ಯಾಯಾಲಯಕ್ಕೆ ಹಾಜರಾದ ನಂತರ ದಾವೆಯ ವ್ಯವಹರಣೆಯಿಂದ ಸ್ವತಃ ಗೈರುಹಾಜರಾಗಿರುವನು ಎಂಬ ಕಾರಣದ ಮೇಲೆ ಸೂಕ್ತವಾಗಿ ರೂಪಿಸಿದ ದಾವೆಯನ್ನು ಹೂಡುವ ಅಥವಾ ಕಾನೂನಿನ ಅಡಿಯಲ್ಲಿ ಲಭ್ಯವಿರುವ ಇತರ ಯಾವುದೇ ಪರಿಹಾರವನ್ನು ಪಡೆದುಕೊಳ್ಳುವ ಮೂಲಕ ಡಿಕ್ರಿಯ ಸಿಂಧುತ್ವ ಅಥವಾ ಅನ್ಯಥಾ ಕಾರಣವನ್ನು ಪ್ರಶ್ನಿಸಬಹುದು ಎಂದು ಮಾನ್ಯ ನ್ಯಾಯಮೂರ್ತಿಗಳು ನಿರ್ಣಯಿಸಿದ್ದಾರೆ.

31. ಆದರೆ, ಹಿತಾಸಕ್ತಿ ಹೊಂದಿರುವ ಉತ್ತರಾಧಿಕಾರಿಯು, XXIIನೇ ಕ್ರಮಾದೇಶದ 10ನೇ ನಿಯಮದ ಅಡಿಯಲ್ಲಿ ತನ್ನನ್ನು ದಾಖಲೆಯಲ್ಲಿ ತರುವ ಸಂದರ್ಭದೊಂದಿಗೆ ಮಾನ್ಯ ನ್ಯಾಯಮೂರ್ತಿಗಳು ವ್ಯವಹರಿಸುತ್ತಿದ್ದರು ಎಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಆದರೆ, ಪ್ರಸ್ತುತ ಮೊಕದ್ದಮೆಯು, XXIIನೇ ಕ್ರಮಾದೇಶದ 10ನೇ ನಿಯಮದ ಅಡಿಯಲ್ಲಿ ಬರದೆ, XXIIನೇ ಕ್ರಮಾದೇಶದ 4ನೇ ನಿಯಮದ ಅಡಿಯಲ್ಲಿ ಬರುತ್ತದೆ.

32. ***ಒಡಿಸ್ಸಾ ಸರ್ಕಾರ -ವಿರುದ್ಧ- ಅಶೋಕ್ ಟ್ರಾನ್ಸ್‌ಪೋರ್ಟ್ ಏಜನ್ಸಿ ಮತ್ತು ಇತರರು***[18] ಮೊಕದ್ದಮೆಯಲ್ಲಿ, ಈ ಪೀಠದ ಮಾನ್ಯ ನ್ಯಾಯಮೂರ್ತಿಗಳ ಪೈಕಿ, ***ಧುರಂಧರ್ ಪ್ರಸಾದ್ ಸಿಂಗ್*** ಮೊಕದ್ದಮೆಯಲ್ಲಿನ ಪೀಠದಲ್ಲಿ ನ್ಯಾಯಾಧೀಶರಾಗಿದ್ದ ಒಬ್ಬ ನ್ಯಾಯಮೂರ್ತಿಗಳು ಸಹ ಅಂಥಹುದೇ ಪ್ರಶ್ನೆ ಉದ್ಭವಿಸಿದ್ದ ಈ ಮೊಕದ್ದಮೆಯನ್ನು ಕುರಿತು ನಿರ್ಣಯಿಸಿದ್ದಾರೆ.

33. ***ಧುರಂಧರ್ ಪ್ರಸಾದ್ ಸಿಂಗ್*** ಮೊಕದ್ದಮೆಯನ್ನು ಕುರಿತು ನಿರ್ಧರಿಸಿದ್ದಂಥ ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎನ್. ಅಗರ್‌ವಾಲ್ ಅವರು, ಹಿತಾಸಕ್ತಿ ಹೊಂದಿರುವ ಉತ್ತರಾಧಿಕಾರಿಯು, ಸಿವಿಲ್ ಪ್ರಕ್ರಿಯಾ ಸಂಹಿತೆಯ 47ನೇ ಪ್ರಕರಣದ ಅಡಿಯಲ್ಲಿ ಆಕ್ಷೇಪಣೆಯನ್ನು ಎತ್ತಬಹುದಾಗಿದೆ ಎಂಬ ತಮ್ಮ ಅಭಿಪ್ರಾಯವನ್ನು ಪುನರುಚ್ಚರಿಸಿದ್ದಾರೆ. ಆದಾಗ್ಯೂ, ಪೀಠದ ಮತ್ತೊಬ್ಬ ನ್ಯಾಯಾಧೀಶರು ಈ ಅಭಿಪ್ರಾಯದೊಂದಿಗೆ ಸಹಮತಿ ಹೊಂದಿರುವುದಿಲ್ಲ ಮತ್ತು ಅದರಿಂದಾಗಿ ವಿಷಯವನ್ನು ವಿಸ್ತೃತ ಪೀಠಕ್ಕೆ ಉಲ್ಲೇಖಿಸಲಾಯಿತು.

34. ವಿಸ್ತೃತ ಪೀಠವು ಅದರ ಅಭಿಪ್ರಾಯವನ್ನು ನೀಡಿದ್ದು, ಅದನ್ನು (2005) 1 ಎಸ್‌ಸಿಸಿ 536ರಲ್ಲಿ ವರದಿ ಮಾಡಲಾಗಿದೆ. ನಿಗಮ ಮತ್ತು ಒಡಿಸ್ಸಾ ಸರ್ಕಾರ ಇವುಗಳನ್ನು, ವಿಲೀನ ಆದೇಶದ ನಿಬಂಧನೆಗಳ ಆಧಾರದ ಮೇಲೆ ಡಿಕ್ರಿಗೆ ಮುನ್ನ ದಾವೆಯಲ್ಲಿ ಸೇರಿಸಬಹುದಾಗಿತ್ತು ಎಂದು ಮಾನ್ಯ ನ್ಯಾಯಮೂರ್ತಿಗಳು

18. (2002) 9 ಎಸ್‌ಸಿಸಿ 28

ಅಭಿಪ್ರಾಯಪಟ್ಟಿದ್ದಾರೆ. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಅಪೀಲುದಾರರು ಎತ್ತಲು ಲಭ್ಯವಿರಬಹುದಾದಂಥ ಯಾವುವೇ ಹೆಚ್ಚುವರಿ ವಾದಗಳಿಗೆ ಒಳಪಟ್ಟು ಪ್ರತಿವಾದಿಯು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಅಳವಡಿಸಿಕೊಂಡ ನಿಲುವಿಗೆ ಸುಸಂಗತವಾಗಿರುವ ದಾವೆಯನ್ನು ಪ್ರತಿವಾದಿಸುವ ಅವಕಾಶವನ್ನು ಮಾತ್ರ ಬಯಸಿದ್ದರಿಂದ, ಅಪೀಲುದಾರನು ಎತ್ತಿದ ಆಕ್ಷೇಪಣೆಗಳ ಆಧಾರದ ಮೇಲೆ ಜಾರಿ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಆದೇಶಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಳ್ಳಿಹಾಕಿತು. ಜಾರಿ ಅರ್ಜಿಯನ್ನು ಕೊನೆಗೊಳಿಸಲಾಯಿತು ಮತ್ತು ನ್ಯಾಯದ ಹಿತಾಸಕ್ತಿಯಲ್ಲಿ, ಏಕಪಕ್ಷೀಯ ಡಿಕ್ರಿಯನ್ನು ತಳ್ಳಿಹಾಕಲಾಯಿತು ಹಾಗೂ ಹೊಸ ವಿಚಾರಣೆಗಾಗಿ ವಿಷಯವನ್ನು ಅಧೀನ ನ್ಯಾಯಾಧೀಶರ ನ್ಯಾಯಾಲಯಕ್ಕೆ ಹಿಂದಿರುಗಿಸಲಾಯಿತು.

35. ***ಗುರ್‌ನಾಮ್ ಸಿಂಗ್ –ವಿರುದ್ಧ– ಗುರುಬಚನ್ ಕೌರ್ (ಮೃತ) ಕಾನೂನು ಪ್ರತಿನಿಧಿಗಳ ಮೂಲಕ***[19] ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ಇತ್ತೀಚಿನ ತೀರ್ಪಿನಲ್ಲಿ, ಮಾನ್ಯ ನ್ಯಾಯಮೂರ್ತಿಗಳು ***ಕಿರಣ್ ಸಿಂಗ್ –ವಿರುದ್ಧ– ಚಮನ್ ಪಾಸ್ವಾನ್*** ಮೊಕದ್ದಮೆಯಲ್ಲಿನ ತೀರ್ಪನ್ನು ಪುನಃ ಉಲ್ಲೇಖಿಸಿದ್ದು, ಅಪೀಲಿಗೆ ಸಂಬಂಧಿಸಿದ ಪಕ್ಷಕಾರನ ಮರಣದ ನಂತರ, ಅಪೀಲಿಗೆ ಸಂಬಂಧಿಸಿದ ಪಕ್ಷಕಾರರು ಅಥವಾ ಪಕ್ಷಕಾರನ ಮರಣದ ದಿನಾಂಕದಿಂದ 90 ದಿನಗಳ ಒಳಗಾಗಿ ಮೃತ ಪಕ್ಷಕಾರನ ಸ್ಥಾನದಲ್ಲಿ ತಮ್ಮ ಹೆಸರುಗಳ ಸೇರ್ಪಡೆಗೆ ದಾವೆಯ ಹಕ್ಕು ಮೃತನ ಯಾವ ಕಾನೂನುಬದ್ಧ ಪ್ರತಿನಿಧಿಗಳಿಗೆ ಪ್ರಾಪ್ತವಾಗುವುದೋ ಆ ಪ್ರತಿನಿಧಿಗಳು ಯಾವುದೇ ಅರ್ಜಿಯನ್ನು ಸಲ್ಲಿಸದಿದ್ದರೆ, ಪಕ್ಷಕಾರನ ಮರಣದ ದಿನಾಂಕದಿಂದ 90 ದಿನಗಳ ಮುಕ್ತಾಯದ ನಂತರ ಅಂಥ ಅಪೀಲು ಸ್ವಯಂ ಆಗಿ ಕೊನೆಗೊಳ್ಳುತ್ತದೆ ಎಂಬ ಅಂಶಕ್ಕೆ ಒತ್ತು ನೀಡಲು ನ್ಯಾಯಮೂರ್ತಿ ವೆಂಕಟರಾಮ ಅಯ್ಯರ್ ಅವರು ನೀಡಿದ ತೀರ್ಪನ್ನು ಉಲ್ಲೇಖಿಸಿದ್ದಾರೆ. ಪ್ರತ್ಯರ್ಜಿದಾರ–ಪ್ರತಿವಾದಿಯ ಮೊಕದ್ದಮೆಯಲ್ಲಿ, ನಿಯಮಿಸಲಾದ ಸಮಯದೊಳಗೆ ಸಂಬಂಧಪಟ್ಟ ಪಕ್ಷಕಾರರು

19. (2017) 13 ಎಸ್‌ಸಿಸಿ 414

ಕಾನೂನುಬದ್ಧ ಪ್ರತಿನಿಧಿಗಳ ಸೇರ್ಪಡೆಯ ಅರ್ಜಿಯನ್ನು ಸಲ್ಲಿಸದಿದ್ದ ಪರಿಣಾಮಗಳನ್ನು, ಸಂಹಿತೆಯ XXIIನೇ ಕ್ರಮಾದೇಶದ 3(2)ನೇ ಮತ್ತು 4(3)ನೇ ನಿಯಮಗಳನ್ನು ಪಾಲಿಸದಿರುವ ಕಾನೂನು ಪರಿಣಾಮವನ್ನು, ಪಕ್ಷಕಾರನ ಮರಣದ ದಿನಾಂಕದಿಂದ 90 ದಿನಗಳ ಮುಕ್ತಾಯದ ನಂತರ ಕೊನೆಗೊಳಿಸಲಾಗಿದೆ ಎಂಬ ಎರಡನೇ ಅಪೀಲಿನ ವಜಾಗೊಳ್ಳುವಿಕೆಯಲ್ಲಿ ಪರಿಣಮಿಸಿ ಪ್ರವರ್ತನೆಗೆ ಬರುತ್ತದೆ ಎಂಬುದು XXIIನೇ ಕ್ರಮಾದೇಶದ 4(3)ನೇ ನಿಯಮದ ಇಂಗಿತವಾಗಿದೆ.

36. ***ಕಿರಣ್ ಸಿಂಗ್*** ಮೊಕದ್ದಮೆಯಲ್ಲಿನ ತೀರ್ಪನ್ನು ಮತ್ತೆ ಪುನರುಚ್ಚರಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅದು ಅಕೃತವೆಂದಾದರೆ, ಜಾರಿ ವ್ಯವಹರಣೆಗಳನ್ನು ಒಳಗೊಂಡು ಯಾವುದೇ ವ್ಯವಹರಣೆಯಲ್ಲಿ ಅಥವಾ ಡಿಕ್ರಿದಾರನು ಅಂಥ ಡಿಕ್ರಿಯನ್ನು ಜಾರಿಗೊಳಿಸಬೇಕೆಂದು ಕೋರಿದಾಗಲೆಲ್ಲಾ ಆನುಷಂಗಿಕ ವ್ಯವಹರಣೆಗಳಲ್ಲಿ ಸಹ ಅದರ ಸಿಂಧುತ್ವವನ್ನು ಪ್ರಶ್ನಿಸಬಹುದಾಗಿದೆ ಎಂದು ತೀರ್ಪು ನೀಡಿದೆ. ಇದಕ್ಕೆ ಕಾರಣ, ಈ ಸ್ವರೂಪದ ದೋಷವು, ಅಂಥ ಡಿಕ್ರಿಯನ್ನು ಹೊರಡಿಸುವಲ್ಲಿ ನ್ಯಾಯಾಲಯದ ಅಧಿಕಾರದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಮೊಕದ್ದಮೆಯ ಮೂಲಕ್ಕೆ ಹೋಗುತ್ತದೆ ಎಂಬುದಾಗಿದೆ.

37. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಈ ತತ್ವವು, ಮೃತ ವ್ಯಕ್ತಿಯ ಪರವಾಗಿ ಅಥವಾ ವಿರುದ್ಧವಾಗಿ ಹೊರಡಿಸಿದ ಡಿಕ್ರಿಯು "ಅಕೃತ"ವಾದುದು ಎಂಬುದು ಕಾನೂನಿನ ಇತ್ಯರ್ಥವಾದ ತತ್ವವಾಗಿದೆ. ತೀರ್ಪನ್ನು ಮುಕ್ತಾಯಗೊಳಿಸುತ್ತಾ, ಅಪೀಲಿನಲ್ಲಿ ಅಥವಾ ಅಂಥ ಡಿಕ್ರಿಯಿಂದ ಉದ್ಭವಿಸಿದ ಜಾರಿ ವ್ಯವಹರಣೆಗಳಲ್ಲಿ ಸಹ ಕಾನೂನುಸಮ್ಮತತೆಗೆ ಸಂಬಂಧಿಸಿದ ಪ್ರಶ್ನೆಯನ್ನು ಎತ್ತಬಹುದು ಎಂದು ಅದು ನಿರ್ಣಯಿಸಿದೆ.

38. ಮೇಲೆ ಹೇಳಿದ ಕಾನೂನಿನ ಸ್ಥಿರೀಕರಣದ ಹಿನ್ನಲೆಯಲ್ಲಿ, ಹೊರಡಿಸಲಾದ ಡಿಕ್ರಿಯು ಅಕೃತವಾಗಿದೆ ಮತ್ತು ತಮ್ಮ ವಿರುದ್ಧ ಜಾರಿಗೊಳಿಸಲಾಗುವುದಿಲ್ಲವೆಂಬ ಘೋಷಣೆಯನ್ನು ಕೋರಿ ಮೃತ ಪ್ರತಿವಾದಿಯ ವಾರಸುದಾರರು ಪ್ರತ್ಯೇಕ ದಾವೆಯನ್ನು ಹೂಡಬಹುದೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

39. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತ–ಪ್ರತಿವಾದಿ ಸಂಖ್ಯೆ: 6 ಈತನ ಕಾನೂನುಸಮ್ಮತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಒಬ್ಬರಾದರೂ ಈಗಾಗಲೇ ದಾಖಲೆಯಲ್ಲಿರಬೇಕಿತ್ತು ಎಂದು ಪ್ರತಿವಾದಿಗಳ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ. ವರ್ಗ–I ವಾರಸುದಾರಳಾಗಿರುವ ಪ್ರತಿವಾದಿ ಸಂಖ್ಯೆ: 6 ಈತನ ತಾಯಿಯನ್ನು ಈಗಾಗಲೇ ದಾಖಲೆಗೆ ತರಲಾಗಿದೆ ಮತ್ತು ಆದ್ದರಿಂದ ಪ್ರತಿವಾದಿ ಸಂಖ್ಯೆ: 6 ವಿರುದ್ಧ ದಾವೆಯನ್ನು ಕೊನೆಗೊಳಿಸಲಾಗಿದೆ ಎಂದು ಹೇಳಲಾಗುವುದಿಲ್ಲ ಎಂದು ಅವರು ನಿವೇದಿಸಿಕೊಂಡಿದ್ದಾರೆ.

40. ಈ ಎಲ್ಲ ವಾದಗಳನ್ನು ವಿಚಾರಣಾ ನ್ಯಾಯಾಲಯದ ಮುಂದೆ ವಾದಿಸಬಹುದಾಗಿದೆ. ದಾವೆಯನ್ನು ಹೂಡಲಾಗಿದೆ ಎಂದು ಒಮ್ಮೆ ನಿರ್ಧರಿಸಿದರೆ, ಡಿಕ್ರಿಯು ಅಕೃತವಾದುದೆಂದು ವಾದಿಗಳ ಕ್ಲೇಮನ್ನು ಖಂಡಿಸಲು ಕಾನೂನಿನ ಅಡಿಯಲ್ಲಿ ಲಭ್ಯವಿರುವ ಎಲ್ಲಾ ಆಕ್ಷೇಪಣೆಗಳನ್ನು ಪ್ರತಿವಾದಿಗಳು ಎತ್ತಬಹುದು.

41. ಮೇಲಿನ ಅಭಿಪ್ರಾಯದ ಹಿನ್ನಲೆಯಲ್ಲಿ, ದಾವೆಯನ್ನು ಹೂಡಲಾಗುವುದಿಲ್ಲವೆಂದು ನಿರ್ಧರಿಸಿ ಕೆಳ ನ್ಯಾಯಾಲಯಗಳು ಹೊರಡಿಸಿದ ತೀರ್ಪುಗಳು ಕಾನೂನಿಗೆ ವಿರುದ್ಧವಾಗಿವೆ ಮತ್ತು ಅದರಿಂದ ಅವುಗಳನ್ನು ತಳ್ಳಿಹಾಕಲಾಗಿದೆ. ತದನುಸಾರ ಅಪೀಲು ಸಲ್ಲಿಸಲು ಅವಕಾಶ ನೀಡಲಾಗಿದ್ದು, ದಾವೆಯನ್ನು ಹೂಡಲಾಗುವುದಿಲ್ಲವೆಂಬ ಕಾರಣದ ಮೇಲೆ ಪ್ರತಿವಾದಿಗಳಿಗೆ ನೋಟೀಸನ್ನು ನೀಡದೆ ದಾವೆಯನ್ನು ವಜಾಗೊಳಿಸಿರುವುದರಿಂದ, ಈರ್ವರೂ ಪಕ್ಷಕಾರರಿಗೆ ಅವಕಾಶವನ್ನು ನೀಡಿ ಗುಣಾರ್ಹತೆಗಳನ್ನು ಮರು–ಆಲಿಸಬೇಕೆಂದು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

42. ವ್ಯಯ ಮಾಡಿದ ಸಮಯವನ್ನು ಮತ್ತು ಅಂತಿಮ ಡಿಕ್ರಿ ವ್ಯವಹರಣೆಗಳು ವಿಚಾರಣಾ ನ್ಯಾಯಾಲಯದ ಮುಂದೆ ಪ್ರಗತಿಯಲ್ಲಿರುವುದನ್ನು ಗಮನದಲ್ಲಿರಿಸಿಕೊಂಡು, ವಿಚಾರಣೆಯನ್ನು ಪೂರ್ಣಗೊಳಿಸಿ, ಇಂದಿನಿಂದ ಒಂದು ವರ್ಷದ ಅವಧಿಯೊಳಗೆ ತೀರ್ಪನ್ನು ಹೊರಡಿಸಲು ವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಲಾಗಿದೆ.

43. ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.

ಮೇಲೆ ಹೇಳಿದ ಆದೇಶವನ್ನು ಗಮನದಲ್ಲಿರಿಸಿಕೊಂಡು, ಐ.ಎ.1/2016 ಇದು ಪರಿಗಣನೆಗೆ ಉಳಿಯುವುದಿಲ್ಲ ಮತ್ತು ಅದನ್ನು ತದನುಸಾರವಾಗಿ ವಿಲೆ ಮಾಡಲಾಗಿದೆ.